
ವಚನ ತಪಸ್ವಿ

ಫ. ಗು. ಹಳಕಟ್ಟಿ

ಪ್ರೊ. ಜಿ. ಅಶ್ವತ್ಥನಾರಾಯಣ



೧೨೪

(ಶ್ರೀಸಾಮಾನ್ಯರ ಮಾಲಿಕೆಯಲ್ಲಿ ಶರಣರ ಜೀವನ ಚಿತ್ರ)

ವಚನ ತಪಸ್ವಿ
ಫ.ಗು. ಹಳಕಟ್ಟಿ

ಲೇಖಕರು : ಪ್ರೊ. ಜಿ. ಅಶ್ವತ್ಥನಾರಾಯಣ

ಗೌರವ ಸಂಪಾದಕರು : ಡಾ. ಆರ್. ಶಿವಣ್ಣ

ಸಂಪಾದಕರು : ಡಾ. ಬಿ.ಎಸ್. ಸ್ವಾಮಿ

ಬಸವತತ್ತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ ಪ್ರಕಾಶನ

ಬೆಂಗಳೂರು

ವಚನ ತಪಸ್ವಿ ಫ.ಗು. ಹಳಕಟ್ಟಿ : ಲೇ: ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರಕಾಶಕರು: ಬಸವತತ್ತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ ಪ್ರಕಾಶನ, ನಂ.೫೯೭, ೬ನೇ ಅಡ್ಡರಸ್ತೆ, ೪ನೇ ಹಂತ, ಬಿ.ಇ.ಎಂ.ಎಲ್. ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-೯೮. (Mob) 9448685544 Ph : 28605660

ಪುಟಗಳು : iv+೫೨

ಪ್ರಥಮ ಮುದ್ರಣ : ೨೦೦೯

ಬೆಲೆ : **ರೂ. ೨೫/-**

ಲೇಖಕರು ಈ ಗ್ರಂಥದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಪ್ರಕಾಶಕರು ಜವಾಬುದಾರರಲ್ಲ.

ಮುಖಪುಟ : ಮೋನಪ್ಪ

ಛಾಯಾಕ್ಷರ ಜೋಡಣೆ:
ಕುಮುದ ಗ್ರಾಫಿಕ್ಸ್, ಬೆಂಗಳೂರು. Ph : 9945814774

ಮುದ್ರಕರು:
ಸುಮುಖ ಪ್ರಿಂಟರ್ಸ್
ನಂ. ೨೬/೨, ೬ನೇ ಅಡ್ಡರಸ್ತೆ
ಗಣಪತಿನಗರ, ಬ್ಯಾಟರಾಯನಪುರ
ಮೈಸೂರು ರಸ್ತೆ, ಬೆಂಗಳೂರು-೫೬೦೦೨೬

ಪ್ರಕಾಶಕರ ಮಾತು

'ಬಸವತತ್ತ್ವ ಪ್ರಸಾರ ಕೇಂದ್ರ'ದ ಉದ್ದೇಶ ಶರಣತತ್ತ್ವ, ಸಾಧನೆ, ಬೋಧನೆಗಳನ್ನು ಪ್ರಸಾರ ಮಾಡಿ ಜನಸಾಮಾನ್ಯರ ಗ್ರಹಿಕೆಗೆ ಒಳಪಡುವಂತೆ ಪುಸ್ತಕಗಳನ್ನು ಪ್ರಕಟಿಸುವುದು. ಈಗಾಗಲೇ ಶಿವಶರಣರನ್ನು ಕುರಿತು ಅನೇಕ ಕೃತಿಗಳು ಹೊರಬಂದಿವೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಸರಳವಾಗಿ, ಸುಲಭವಾಗಿ, ಹಳ್ಳಿಯ ನವಸಾಕ್ಷರರೂ, ಮಕ್ಕಳೂ ಓದಿ ಅರ್ಥಮಾಡಿಕೊಳ್ಳುವ ಉದ್ದೇಶದಿಂದ "ಶ್ರೀಸಾಮಾನ್ಯರ ಮಾಲಿಕೆ" ಶೀರ್ಷಿಕೆಯಡಿಯಲ್ಲಿ ೧೨೫ ಶರಣರ ಜೀವನ- ಸಾಧನೆಗಳನ್ನು ಕುರಿತ ಕೃತಿಗಳನ್ನು ನಾಡಿನ ಶ್ರೇಷ್ಠ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಲಾಗಿದೆ. ಇದು ಇನ್ನೂ ಮುಂದುವರೆಯಲಿದೆ. ಮುಂದೆ ಈ ಸಂಖ್ಯೆ ೩೦೦ಕ್ಕೂ ಏರಲಿದೆ. ಇದಲ್ಲದೆ ಶಿವಶರಣರ ಮೌಲಿಕ ಕೃತಿಗಳನ್ನೂ ಜೊತೆಜೊತೆಯಲ್ಲೇ ಪ್ರಕಟಿಸುವ ಮಹದುದ್ದೇಶವನ್ನು ಹೊಂದಿದ್ದೇವೆ.

ಈ ಕೃತಿಗಳನ್ನು ಬೇಸರವಿಲ್ಲದೆ ಓದಿ ಮುಗಿಸುವ ಉದ್ದೇಶ ದಿಂದ ೩೨ ರಿಂದ ೬೪ ಪುಟಗಳಿಗೆ ಸೀಮಿತ ಮಾಡಿ

ಕೊಂಡಿದ್ದೇವೆ. ಶಿವಶರಣರ ಸಮಗ್ರ ಚಿತ್ರಣವನ್ನು ಈ ಪುಟಗಳ ಪರಿಮಿತಿಯಲ್ಲಿ ಹೊರತರಲು ಯೋಜಿಸಲಾಗಿದೆ.

"ವಚನ ತಪಸ್ವಿ ಫ.ಗು. ಹಳಕಟ್ಟಿ" ಎಂಬ ಹೊತ್ತಗೆಯನ್ನು ರಚಿಸಿಕೊಟ್ಟ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಸಾಹಿತ್ಯಾಭಿಮಾನಿಗಳು ಇವನ್ನು ಕೊಂಡು ಓದಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಡಾ. ಆರ್. ಶಿವಣ್ಣ

ವಚನ ತಪಸ್ವಿ
ಫ.ಗು. ಹಳಕಟ್ಟಿ

ಸಕಲರಾತ್ಮೋನ್ನತಿಗೆ ಸದವಕಾಶವನೀವ
ವಚನ ಶುಭದರ್ಶನವ ಮಾಡಿಸಿದ ಪೂಜ್ಯ
ಭಯಕೆ ಅಭಯವನೀವ ಸಾವಿಗಮೃತವೆರೆವ
ಶರಣರಾ ಸೂಳ್ನುಡಿ ಪ್ರಸಾದ ನೀಡಿದ ಓಜ!

-ಬ.ಗಿ. ಯಲ್ಲಟ್ಟಿ

ಇಳೆಗಿಳಿದ ಶರಣ, ಆಧುನಿಕ ಶರಣ, ಸತ್ಯಶರಣ, ಸಾವರಿಯದ ಶರಣ, ಭೂಮಿಯಲುದಿಸಿದ ಶರಣ, ಅಚ್ಚ ಶಿವರಾತ್ರಿಯ ನಿಚ್ಚ ಶರಣ, ೨೦ನೇ ಶತಮಾನದ ನೂತನ ಶರಣ ಇತ್ಯಾದಿಯಾಗಿ ಕನ್ನಡದ ಸಾಹಿತಿ-ವಿದ್ವಾಂಸರು ಮನಸಾರೆ ಹೊಗಳಿ ಕೊಂಡಾಡಿದ ಫ.ಗು. ಹಳಕಟ್ಟಿ ಅವರು ಕನ್ನಡ ನಾಡಿನಲ್ಲಿ ಶರಣ ಸಂಸ್ಕೃತಿಯನ್ನು ಬದುಕಿನಲ್ಲಿ ಎತ್ತಿತೋರಿಸಿದ ವ್ಯಕ್ತಿ. ಬರಹದಲ್ಲಿ ಪ್ರತಿಪಾದಿಸಿದ ವ್ಯಕ್ತಿ. ನಡೆ-ನುಡಿ ಎರಡರಲ್ಲೂ ಪೂಜ್ಯ-ಓಜರಾದ ಹಳಕಟ್ಟಿ ಅವರು "ಆನೆಯ ಹಾಗೆ ಇದ್ದರೂ ಸಾವಿರ ಸತ್ತರೂ ಸಾವಿರ" ಎಂಬಂತೆ ಅಂದಿಗೂ ಆದರ್ಶಪುರುಷರು, ಇಂದಿಗೂ ಆದರ್ಶ ಪುರುಷರು. ಕೇವಲ ವೀರಶೈವ ಸಮುದಾಯವಷ್ಟೇ ಅಲ್ಲ

ಇಡೀ ಕನ್ನಡನಾಡಿನ ಕನ್ನಡಿಗರೆಲ್ಲ ಕೃತಜ್ಞರಾಗಿರಬೇಕಾಗಿರುವಂಥ ವಚನ ನುಡಿಸೇವೆ ಮಾಡಿದವರು ಹಳಕಟ್ಟಿ ಅವರು.

'ತೀರ್ಥಂ ಕುವನ್ತಿ ತೀರ್ಥಾಣಿ' ಎಂಬಂತೆ ತಾವಿದ್ದ ನೆಲೆಯನ್ನೇ ಪವಿತ್ರ ಕ್ಷೇತ್ರವಾಗಿಸಿದವರು ಮಹಾಪುರುಷರು ವಾಸಿಸುವ ಎಡೆಯೇ ಪುಣ್ಯಕ್ಷೇತ್ರವಾಗುತ್ತದೆ ಎಂಬುದು ನಾರದ ಭಕ್ತಿಸೂತ್ರದ ವಾಣಿ. ಅದಕ್ಕೆ ನಿದರ್ಶನ ಎಂಬಂತೆ ಬಿ.ಎಂ.ಶ್ರೀ. ಅವರ ಮಾತು ನೆನಪಾಗುತ್ತದೆ.

ಕನ್ನಡದ ಕಣ್ವ ಬಿ.ಎಂ.ಶ್ರೀ ಅವರು ಕಾರ್ಯನಿಮಿತ್ತ ವಿಜಾಪುರಕ್ಕೆ ಬಂದಾಗ ವಿಜಾಪುರವೆಂದರೆ ಗೋಳಗುಮ್ಮಟ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಜಗದ್ವಿಖ್ಯಾತವಾದ ಗೋಳಗುಮ್ಮಟ ನಮ್ಮಲ್ಲಿ ಇದೆ. ಅದನ್ನು ಬಿ.ಎಂ.ಶ್ರೀಗೆ ತೋರಿಸಿ ತಮ್ಮ ಸ್ಥಳದ ಹಿರಿಮೆಯನ್ನು ಅವರಿಗೆ ಮನಗಾಣಿಸಬೇಕು ಎಂಬ ಆತುರ ವ್ಯವಸ್ಥಾಪಕರಲ್ಲಿ ಮನೆಮಾಡಿಕೊಂಡಿತ್ತು. ಅವರ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಅದನ್ನು ನೋಡದೆ ಎಲ್ಲಿ ಹೋಗಿ ಬಿಡುವರೋ ತಮ್ಮ ಸ್ಥಳದ ವೈಶಿಷ್ಟ್ಯವನ್ನು ಅವರಿಗೆ ತೋರಿಸಿ ಹೆಮ್ಮೆಪಡಲು ಎಲ್ಲಿ ಆಗುವುದಿಲ್ಲವೋ ಎಂಬ ಆತುರ-ಕಾತರ ಗಳಿಂದ 'ಸಾರ್ ಮೊದಲು ಗೋಳಗುಮ್ಮಟ ದರ್ಶಿಸಿಬಿಡೋಣ' ಎಂದರಂತೆ. ಅದಕ್ಕೆ ಬಿ.ಎಂ.ಶ್ರೀ ಹೇಳಿದರಂತೆ. "ಅದಕ್ಕಿಂತಲೂ ಮೊದಲು ನಾನಿಲ್ಲಿಯೇ ಜೀವಂತ ಶರಣ ಸಾಹಿತ್ಯ ಗೊಮ್ಮಟವಾದ ವಚನ ಗುಮ್ಮಟ ಡಾ. ಫ.ಗು. ಹಳಕಟ್ಟಿ ಅವರನ್ನು ನೋಡಬೇಕು" ಎಂದರಂತೆ.

ಬಿ.ಎಂ.ಶ್ರೀ ಅವರು ವಚನಗುಮ್ಮಟ ಎಂದು ಹಳಕಟ್ಟಿ ಅವರನ್ನು ಕರೆದರೆ ಡಾ. ಹಂಪನಾ 'ನವಕರ್ನಾಟಕ ಶಿಲ್ಪಿ' ಎಂದೂ, ಹಿರಿಯ ಸಾಹಿತಿ ಸಿಂಪಿ ಲಿಂಗಣ್ಣ ಅವರು 'ಕರ್ನಾಟಕದ ಮ್ಯಾಕ್ಸ್‌ಮುಲ್ಲರ್' ಎಂದೂ, ಬ್ರಿಟನ್ ಸರ್ಕಾರ ರಾವ್ ಸಾಹೇಬ, ರಾವಬಹಾದೂರ ಎಂದು ಕರೆದಿದ್ದಾರೆ.

ಈ ಎಲ್ಲ ಮಾತುಗಳೂ ಹಳಕಟ್ಟಿ ಅವರಿಗೆ ಅನ್ವರ್ಥನಾಮ ಗಳಾಗಿವೆ. ಹಳಕಟ್ಟಿ ಅವರ ಹಾಗೆ ಬಿರುದಾಂಕಿತರಾದವರು ನಮ್ಮಲ್ಲಿ ಅನೇಕರಿದ್ದಾರೆ. ಆದರೆ ಜನ ನೀಡಿದ ಪ್ರಶಸ್ತಿಗಳಿಗೆ ಅನುಗುಣವಾಗಿ ನಡೆ-ನುಡಿ ಒಂದಾಗಿ ನಾಡಿಗೆ ನಿರಂತರ ಸೇವೆ ಸಲ್ಲಿಸಿ ಶುದ್ಧ ಕಾಯಕದಿಂದ ಸಚ್ಚಾರಿತ್ರ್ಯದಿಂದ ಜನತೆಗೆ ಬೆಳಕಾದವರು ಹಳಕಟ್ಟಿ ಅವರು ಎಂದರೆ ಅತಿಶಯೋಕ್ತಿ ಅಲ್ಲ.

ಫ.ಗು. ಹಳಕಟ್ಟಿ ಅವರನ್ನು ನೆನೆದೊಡನೆ ಕಣ್ಣಮುಂದೆ ನಿಲ್ಲುವುದು ಅವರು ಇತಿಹಾಸದ ಗರ್ಭದಿಂದ ಹೊರತಂದ ಆದ್ಯರ ವಚನ ಶಾಸ್ತ್ರ ಸಾಹಿತ್ಯ, ಇತರರಿಗೆ ಆದರ್ಶಪ್ರಾಯವಾದ ಸರಳ, ಪ್ರಾಮಾಣಿಕ ನಡೆನುಡಿ ಮತ್ತು ನಾಡಿನ ವಿವಿಧ ಸಂಘಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆ, ತಾವೇ ಸಂಸ್ಥೆಗಳನ್ನು ಸ್ಥಾಪಿಸಿ ಸಲ್ಲಿಸಿದ ಕೊಡುಗೆಗಳು ನೆನಪಾಗುತ್ತವೆ.

ಧೀಮಂತ ವ್ಯಕ್ತಿತ್ವ

ಹಳಕಟ್ಟಿ ಅವರು ಏನು ಮಾಡಿದರು ಎಂಬುದನ್ನು ತಿಳಿಯುವ ಮುಂಚೆ ಅವರು ಎಂಥವರು ಎಂಬುದನ್ನು ತಿಳಿಯುವುದು ಮುಖ್ಯ.

ಏಕೆಂದರೆ, ರವೀಂದ್ರನಾಥ ಠಾಗೂರರು ಹೇಳಿದ ಹಾಗೆ 'ದುಡ್ಡು, ಬಟ್ಟೆಯಿಂದ ದೊಡ್ಡವರಾದೋರಿಲ್ಲ, ದೊಡ್ಡ ಗುಣದಿಂದ ದೊಡ್ಡವರಾದೋರೆಲ್ಲ' ಎಂಬ ಮಾತಿಗೆ ಸಾಕ್ಷೀಭೂತರಾದವರು.

ಹರಿದಾಸರು ಹೇಳಿರುವ ಮಾತು ಇದು, 'ಸಾಲ ಮಾಡಲು ಬೇಡ, ಸಾಲದೆನ್ನಲು ಬೇಡ, ನಾಳೆಗಿಡಲು ಬೇಡ' ಈ ಮಾತಿಗೆ ಅದ್ಭುತ ನಿದರ್ಶನ ಹಳಕಟ್ಟಿ ಅವರು. ಸರಳ ಜೀವನ ನಡೆಸಿದ ಹಳಕಟ್ಟಿ ಅವರು ಸಾತ್ತ್ವಿಕ ಸೌಜನ್ಯಮೂರ್ತಿ ಆಗಿದ್ದರು. ಬಡತನ ಇದ್ದವರು ಅದನ್ನು ಹೊರಗಿನ ನೋಟದಲ್ಲಿ ಕೆಲವೊಮ್ಮೆ ಮರೆಮಾಚಲು ಯತ್ನಿಸುವುದುಂಟು. ಆದರೆ ಹಳಕಟ್ಟಿ ಅವರು ಹಾಗಿರಲಿಲ್ಲ. ಅವರದು ಪ್ರಾಮಾಣಿಕ ಬದುಕು. ಇದಕ್ಕೆ ನಿದರ್ಶನವೆಂದರೆ ಡಾ. ಎಸ್.ಆರ್. ಗುಂಜಾಳ್ ಅವರು ಉಲ್ಲೇಖಿಸುವ ಪ್ರಸಂಗ.

ಸತ್ಕಾರ ಸಮಾರಂಭವೊಂದಕ್ಕೆ ಹಳಕಟ್ಟಿ ಅವರನ್ನು ಆಹ್ವಾನಿಸಿದ್ದರು. ಅವರನ್ನು ಸತ್ಕರಿಸಿ ಗುಣಗಾನ ಮಾಡಿ ಸನ್ಮಾನಿಸಿದರು. ಹಳಕಟ್ಟಿ ಅವರಂಥ ಸ್ವಾರ್ಥತ್ಯಾಗಿಗಳು, ಸಜ್ಜನರು, ಸಾಹಿತ್ಯ ಸೇವಾಧುರೀಣರು ಇನ್ನೊಬ್ಬರಿಲ್ಲ ಎಂಬಂತೆ ಪರಿಪರಿಯಾಗಿ ಹೊಗಳಿದರು. ಸಮಾರಂಭದ ಕಾರ್ಯಕ್ರಮವೆಲ್ಲ ಮುಕ್ತಾಯವಾದ ಅನಂತರ ಸಭಿಕರಲ್ಲಿ ಒಬ್ಬರು ಹಳಕಟ್ಟಿ ಅವರನ್ನು ಕುರಿತು ಆಕ್ಷೇಪದ ದನಿಯಲ್ಲಿ ಕೇಳಿದರು "ನೀವು ಇಂತಹ ಗೌರವ ಪದವಿಯನ್ನು ಸ್ವೀಕರಿಸುವ ಸಮಾರಂಭಗಳಿಗೆ ಬರುವಾಗಲಾದರೂ

ಈ ತ್ಯಾಪೆ ಹಚ್ಚಿದ ಕೋಟು, ಹರಕು ರುಮಾಲು ಬಿಟ್ಟು ಬರಬಾರದೇನ್ರೀ?" ಅದಕ್ಕೆ ಹಳಕಟ್ಟಿ ಅವರು ಉತ್ತರಿಸಿದರು, "ಹೌದು ನೀವೆನ್ನುವುದು ನಿಜ. ಆದರೆ ನೀವು ನೀಡುವ ಈ ಗೌರವ ಪದವಿಗಳಿಂದ ಆಗುವುದಾದರೂ ಏನು? ಪದವಿಗಳನ್ನು ಮೈಯಲ್ಲಿ ತೊಟ್ಟುಕೊಳ್ಳಲು ಬಂದೀತೇ? ಸದ್ಯ ನನಗಿರುವುದೊಂದೇ ಕೋಟು ಒಂದೇ ರುಮಾಲು. ಮಡಿಮಾಡಿ ಧರಿಸಿಕೊಂಡು ಬಂದಿರುವೆ" ಎಂದರು. ಸೋಗು ಎಂಬುದು ಹಳಕಟ್ಟಿ ಅವರಿಂದ ಸಾವಿರ ಮೈಲಿ ದೂರವಿತ್ತು.

ಹಳಕಟ್ಟಿ ಅವರು ಬಡತನದ ಕುಲುಮೆಯಲ್ಲಿ ಬೆಂದರೂ ಉಳಿದವರ ಕಷ್ಟ ನಿವಾರಣೆಯಲ್ಲಿ ಶ್ರೀಮಂತರೇ ಆಗಿದ್ದರು. ಔದಾರ್ಯ-ದಾನಗುಣ ಎಂಬುದು ಶ್ರೀಮಂತರ ಸ್ವತ್ತಲ್ಲ. ಅದು ಬಡವರಲ್ಲೂ ಇರಬಲ್ಲದು ಎಂಬುದನ್ನು ಪ್ರತ್ಯಕ್ಷವಾಗಿ ಬಾಳಲ್ಲಿ ತೋರಿಸಿ ಕೊಟ್ಟವರು. ಬೇಡಿ ಬದುಕಿದವರಲ್ಲ ನೀಡಿ ಬದುಕಿದವರು ಅವರು. ಪುರಾಣ ಇತಿಹಾಸಗಳಲ್ಲಿ ಕಂಡುಬರುವ ಹಾಗೆ ತನಗೆ ಬೇಕಿದ್ದರೂ ಇದ್ದಷ್ಟನ್ನು ಇತರರಿಗೆ ನೀಡುವ ತ್ಯಾಗಿ ಅವರಾಗಿದ್ದರು. ಅದಕ್ಕೆ ನಾನಾ ನಿದರ್ಶನಗಳು ಅವರ ಬಾಳಿನಲ್ಲಿ ಸಿಗುತ್ತವೆ.

ಒಂದು ನಿದರ್ಶನವೆಂದರೆ, ತಮ್ಮ ಮುದ್ರಣಾಲಯದ ನೌಕರರನ್ನು ಅವರು ನಡೆಸಿಕೊಳ್ಳುತ್ತಿದ್ದ ರೀತಿ. ಅಕಸ್ಮಾತ್ತಾಗಿ ನೌಕರರ ವೇತನ ಕೊಡಲು ಒಂದೆರಡು ದಿನ ತಡರಾದರೆ ತಮ್ಮ ಮನೆಯಲ್ಲಿ

ಬೀಸಿ ಇಟ್ಟ ಹಿಟ್ಟನ್ನು ಅವರ ಮನೆಗೆ ಕೊಟ್ಟು ಕಳುಹಿಸಿ ತಾವು ಊಟವಿಲ್ಲದೆ ಮಲಗುತ್ತಿದ್ದರು. ಹೊಟ್ಟೆಯ ಮಕ್ಕಳಿಗಿಂತ ಹೆಚ್ಚಾಗಿ ಸೇವಕರನ್ನು ನೋಡಿಕೊಳ್ಳುತ್ತಿದ್ದರು. ಈ ಔದಾರ್ಯವನ್ನು ಇಂದಿಗೂ ಮುದ್ರಣಾಲಯದ ಸೇವಕರು ನೆನೆದು ಕಣ್ತುಂಬ ನೀರು ತರುತ್ತಾರೆ. "ತಂದೆಗಿಂತ ಮಿಗಿಲಾಗಿ ಆದರವನ್ನು ತೋರಿದವರು" ಎಂಬ ಸಂಗಮನಾಥ ಹೆಂಡಿಯವರ ಮಾತು, ಹಳಕಟ್ಟಿ ಅವರ ಮಾನವೀಯತೆಗೆ ರನ್ನಗನ್ನಡಿ ಆಗಿದೆ.

ಫ.ಗು. ಹಳಕಟ್ಟಿಯವರ ಹೆಸರಿನಲ್ಲಿರುವ ಹಳಕಟ್ಟಿ ಎಂಬುದು ಮನೆತನದ ಹೆಸರು ಹೌದು; ಧಾರವಾಡದ ಸವದತ್ತಿ ತಾಲ್ಲೂಕಿನಲ್ಲಿರುವ ಸ್ಥಳದ ಹೆಸರೂ ಹೌದು. ಗೊರೂರು ರಾಮಸ್ವಾಮಿ ಅಯ್ಯಂಗಾರರಿಂದ, ಮಾಸ್ತಿ ಗ್ರಾಮ ವೆಂಕಟೇಶ ಅಯ್ಯಂಗಾರರಿಂದ, ತಳುಕು ವೆಂಕಣ್ಣಯ್ಯನರಿಂದ ಪ್ರಸಿದ್ಧಿಗೆ ಬಂದಂತೆ ಹಳಕಟ್ಟಿ ಊರ ಹೆಸರು ಹಳಕಟ್ಟಿ ಅವರಿಂದ ಧನ್ಯವಾಗಿದೆ. ಇವರೆಲ್ಲ ಮಹನೀಯರು. ತಮ್ಮ ಸಾಧನೆ-ಸೇವೆ-ಕೊಡುಗೆಗಳಿಂದ ತಮ್ಮ ಹಿರಿಯರ ಊರುಗಳಿಗೆ ನೆಲೆ-ಬೆಲೆ ಕೀರ್ತಿ ಖ್ಯಾತಿ ತಂದು ಕೊಟ್ಟಿದ್ದಾರೆ. ಫ.ಗು. ಹಳಕಟ್ಟಿ ಅವರಿಂದ ಹಳಕಟ್ಟಿ ಹೆಸರು ಅಜರಾಮರವಾಗಿದೆ.

ಫ.ಗು. ಹಳಕಟ್ಟಿಯ ಕುಟುಂಬದವರು ವೀರಶೈವ ನೇಕಾರ ಸಮಾಜಕ್ಕೆ ಸೇರಿದವರು. ಹಣದಲ್ಲಿ ಬಡತನದ ಮನೆತನವದು. ಗುಣದಲ್ಲಿ ಸಿರಿತನದ ಮನೆತನವಾಗಿತ್ತು.

ಹಳಕಟ್ಟಿ ಅವರ ತಂದೆ ಗುರುಬಸಪ್ಪನವರು ಶಿಕ್ಷಕರೂ ಆಗಿದ್ದರು, ಸಾಹಿತಿಗಳೂ ಆಗಿದ್ದರು. ನಮ್ಮಲ್ಲಿ ಎಷ್ಟೋ ಮಂದಿ ಶಿಕ್ಷಕರಾದರೂ ಸಾಹಿತಿಗಳಲ್ಲ, ಸಾಹಿತಿಗಳಾದವರು ಶಿಕ್ಷಕರಾಗಿಲ್ಲ. ಆದರ್ಶ ಶಿಕ್ಷಕ, ವಿದ್ಯಾಬೋಧಕನಷ್ಟೆ ಅಲ್ಲ, ವಿದ್ಯಾಪ್ರಸಾರಕನೂ ಆಗಿರುತ್ತಾನೆ. ಅಂಥವರೇ ಸಮಾಜಕ್ಕೆ ಹೆಚ್ಚು ಸೇವೆ ಸಲ್ಲಿಸಬಲ್ಲರು. ಗುರುಬಸಪ್ಪನವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರೂ ಶ್ರೇಷ್ಠ ಸಾಹಿತಿಗಳೂ ಆಗಿದ್ದರು. ೧೮೮೮ ರಿಂದ ೧೯೩೦ ರವರೆಗೆ ಸುಮಾರು ೧೦ ಕೃತಿಗಳನ್ನು ರಚಿಸಿದ್ದಾರೆ. ಅವರು ರಚಿಸಿದ ಗ್ರಂಥಗಳಲ್ಲಿ ಇತಿಹಾಸದ ಗ್ರಂಥಗಳೂ ಜೀವನ ಚರಿತ್ರೆಗಳು ಹೆಚ್ಚಾಗಿವೆ. ಆ ಪೈಕಿ ಭೂಮಿ ಸಿದ್ಧಾಂತ ಪುಸ್ತಗಳು, ಇಂಗ್ಲೆಂಡ್ ದೇಶದ ಇತಿಹಾಸ ಮೊದಲಾದವು ಪಠ್ಯಗಳಾಗಿದ್ದವು. ಗುರುಬಸಪ್ಪನವರು ಬಹುಭಾಷಾ ಪ್ರವೀಣರೂ ಆಗಿದ್ದು ಅನುವಾದಕರೂ ಆಗಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕರಲ್ಲಿ ಒಬ್ಬರಾದ ಇವರು ಹಲವಾರು ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿರುವರು.

ತಂದೆಯವರ ಲೇಖನ ಶಕ್ತಿ ಸಾರ್ವಜನಿಕ ಸೇವಾಸಕ್ತಿ ಗ್ರಂಥ ರಚನಾಶಕ್ತಿ ಮುಂತಾದವು ಮಗ ಹಳಕಟ್ಟಿಗೆ ಬಳುವಳಿಯಾಗಿ ಬಂದಿತು ಎನ್ನಬಹುದು.

ಗುರುಬಸಪ್ಪ ಮತ್ತು ದಾನಮ್ಮ ದಂಪತಿಗಳ ದ್ವಿತೀಯ ಮಗುವಾಗಿ ಫಕೀರಪ್ಪ ೨.೭.೧೮೮೦ ರಲ್ಲಿ ಜನಿಸಿದರು. ತಾತನ ಹೆಸರು ಫಕೀರಪ್ಪ. ಮನೆತನದ ಹೆಸರು ಹಳಕಟ್ಟಿ. ತಂದೆ ಹೆಸರು

ಗುರುಬಸಪ್ಪ. ಈ ಮೂರು ಸೇರಿ ಫ.ಗು. ಹಳಕಟ್ಟಿ ಆಗಿ ನಾಡಿನಾದ್ಯಂತ ಮುಂದೆ ಪ್ರಸಿದ್ಧಿ ಹೊಂದಿದರು.

ವಿದ್ಯಾಭ್ಯಾಸ

ಬೆಳೆ ಮೊಳಕೆಯಲ್ಲಿ ಎಂಬಂತೆ ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಕುಟುಂಬದಲ್ಲಿ ರೂಪುಗೊಳ್ಳುವ ಜೊತೆಗೆ ಶಾಲಾ ಶಿಕ್ಷಣದಲ್ಲೂ ರೂಪುಗೊಳ್ಳುತ್ತದೆ. ಶಾಲೆ-ಕುಟುಂಬ ಒಂದೇ ನಾಣ್ಯದ ಎರಡು ಮುಖಗಳು. ಎರಡೂ ರಂಗದಲ್ಲಿ ಗುಣಾತ್ಮಕ ಶಿಕ್ಷಣ ದೊರೆತಿದ್ದು ಹಳಕಟ್ಟಿ ಅವರ ಪುಣ್ಯ. ಹಳಕಟ್ಟಿ ಅವರು ಆತ್ಮಕಥನದಲ್ಲಿ ಹೇಳಿಕೊಂಡಂತೆ "ಒಬ್ಬ ಮನುಷ್ಯನ ಚಟುವಟಿಕೆಗಳು ಯೋಗ್ಯ ನಿರ್ದೇಶನವಿದ್ದರೆ ಜೀವನವನ್ನು ಹಿಗ್ಗಿಸುತ್ತೆ; ಅವು ಅವನು ಎಷ್ಟೇ ತೊಂದರೆ ಎದುರಿಸಬೇಕಾಗಿ ಬಂದರೂ ಜೀವನವನ್ನು ಆನಂದಮಯವಾಗಿಸುತ್ತದೆ."

ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ ಓದಿ ೧೮೯೭ರಲ್ಲಿ ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪಾಸಾದರು. ಮಿಷನರಿ ಶಾಲೆಯ ವಿದ್ಯಾರ್ಥಿಯಾಗಿ ಅಲ್ಲಿ ಶಿಸ್ತು, ವ್ಯಾಸಂಗ ನಿಷ್ಠೆ ಸೇವಾಮನೋಭಾವಗಳನ್ನು ರೂಪಿಸಿಕೊಂಡರು.

ಅನಂತರ ಕಾಲೇಜಿನ ವಿದ್ಯಾಭ್ಯಾಸಕ್ಕಾಗಿ ೧೮೯೭ರಲ್ಲಿ ಮುಂಬಯಿ ಸೈಂಟ್ ಕ್ಸೇವಿಯರ್ ಕಾಲೇಜು ಸೇರಿದರು. ೧೯೦೨ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಪದವೀಧರರಾದರು. ಈ ಕಾಲೇಜಿನ ಶಿಕ್ಷಣದ ಅವಧಿಯಲ್ಲಿ "ಕಾಲೇಜಿನ ಅಧ್ಯಾಪಕರ

ಬೋಧನಾ ವಿಧಾನ, ಕ್ರಮಬದ್ಧತೆ, ಗಂಭೀರ ನಡೆವಳಿಕೆ, ಸಾಹಿತ್ಯ ಸಂಸ್ಕೃತಿಗಳಲ್ಲಿ ಆಸಕ್ತಿ ಮೂಡಿಸಿದ ಬಗೆ" ಪ್ರಭಾವ ಬೀರಿದವು. ಇದರ ಫಲವಾಗಿ ನಾಡುನುಡಿಗಳ ಹೀನಸ್ಥಿತಿ ಅರಿವಿಗೆ ಬಂದು ಅದರ ಉದ್ಧಾರಕ್ಕೆ ಶ್ರಮಿಸಬೇಕೆಂಬ ಸಂಕಲ್ಪವುಂಟಾಯಿತು. ಬಿ.ಎ ಪಾಸಾದ ಮೇಲೆ ಎಂ.ಎ., ಎಲ್.ಎಲ್.ಬಿ. ಎರಡೂ ಪರೀಕ್ಷೆಗಳಿಗೆ ಅಭ್ಯಾಸ ಮಾಡಿ ಹಾಜರಾದರೂ ಅವರು ಉತ್ತೀರ್ಣರಾದುದು ಎಲ್.ಎಲ್.ಬಿ ಪರೀಕ್ಷೆಯಲ್ಲಿ ಮಾತ್ರ. ೧೯೦೭ರಲ್ಲಿ ಎಲ್.ಎಲ್.ಬಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅವರು ವಕೀಲಿ ವೃತ್ತಿಯನ್ನು ಕೈಗೊಂಡರು.

ವಿದ್ಯಾಭ್ಯಾಸ ಮುಗಿದ ಮೇಲೆ ಉದ್ಯೋಗ ದೊರೆತ ಮೇಲೆ ತನ್ನ ಕಾಲಮೇಲೆ ತಾನು ನಿಂತುಕೊಂಡಾಗ ಮದುವೆ ಆಗುವುದು ಈಗಿನ ಕಾಲದ ಪದ್ಧತಿ.

ಉದ್ಯೋಗ ವಿದ್ಯಾಭ್ಯಾಸಗಳನ್ನು ಪರಿಗಣಿಸದೆ ವಯಸ್ಸಿಗೆ ಬಂದೊಡನೆ ವಿವಾಹ ಮಾಡುವುದು ಆ ಕಾಲದ ಪದ್ಧತಿ ಆಗಿತ್ತು. ಹಾಗಾಗಿ ಹಳಕಟ್ಟಿ ಅವರಿಗೆ ಕೇವಲ ೧೬ ವರ್ಷವಾಗಿರುವಾಗಲೇ ಆಗತಾನೇ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿದ ಅವರಿಗೆ ಪ್ರಸಿದ್ಧ ಚಿಕ್ಕೋಡಿ ಮನೆತನದ ತಮ್ಮಣ್ಣಪ್ಪ ಮತ್ತು ಗಂಗವ್ವ ದಂಪತಿಗಳ ಮಗಳು ಭಾಗೀರಥಿದೇವಿಯೊಡನೆ ೭.೨.೧೮೯೬ರಲ್ಲಿ ವಿವಾಹ ನೆರವೇರಿತು. ಹಳಕಟ್ಟಿ ಅವರ ಮಾವ ತಮ್ಮಣ್ಣಪ್ಪ ಚಿಕ್ಕೋಡಿ ಅವರು ಸಮಾಜ ಸೇವಾಧುರೀಣರೂ, ರಾಷ್ಟ್ರಭಕ್ತರೂ,

ಸಾಹಿತಿಗಳೂ ಆಗಿದ್ದರು. ಅನೇಕ ನಾಟಕಗಳನ್ನು ರಚಿಸಿದ್ದರು. ಹಳಕಟ್ಟಿ ಅವರ ಬದುಕಿನಲ್ಲಿ ಮಾರ್ಗದರ್ಶಕರಾಗಿ ನೆರವಿತ್ತರು.

ಹಳಕಟ್ಟಿ-ಭಾಗೀರಥಿಬಾಯಿ ದಂಪತಿಗಳಿಗೆ ಕಾಲಕ್ರಮೇಣ ೭ ಜನ ಮಕ್ಕಳು ಜನಿಸಿದರು. ಮಕ್ಕಳನ್ನು ಪ್ರೀತಿ ವಾತ್ಸಲ್ಯದಿಂದ ಸಾಕಿ ಸಲಹಿದರು. ಮಗ ಗುರುಪುತ್ರಪ್ಪ ಫ.ಗು. ಹಳಕಟ್ಟಿ ಹೇಳಿದ ಮಾತು, "ಮಕ್ಕಳು ಸದೃಢವಾಗಲೆಂದು ನಮಗಾಗಿಯೇ ಒಂದು ಎಮ್ಮೆಯನ್ನು ಕಟ್ಟಿದ್ದರು, ದಿನಾಲು ಎರಡು ಹೊತ್ತು ನಮ್ಮ ತಾಯಿ ಕುಡಿಯಲೆಂದು ನಮಗೆಲ್ಲ ಒಂದೊಂದು ಲೋಟಾ ಹಾಲು ಕೊಡುತ್ತಿದ್ದರು." ಕೇವಲ ಸಾಕಿದ್ದಷ್ಟೇ ಅಲ್ಲ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಕೊಡಲೆತ್ನಿಸಿದರು. ಹಾಗೆಂದ ಮಾತ್ರಕ್ಕೆ ಹಳಕಟ್ಟಿ ಅವರು ಅನುಕೂಲವಂತರಾಗಿ ಇದ್ದರೆಂದೇನಲ್ಲ.

ಬಡತನ ಅವರಿಗೆ ಬೆನ್ನಿಗೆ ಅಂಟಿತ್ತು. ಇದಕ್ಕೆ ಕಾರಣ ಅವರು ಬಂದ ಹಣವನ್ನೆಲ್ಲ ವಚನ ಸಾಹಿತ್ಯೋದ್ಧಾರಕ್ಕೆ ಬಳಸುತ್ತಿದ್ದರು. ಅನೇಕ ಪ್ರಭಾವಶಾಲಿ ಸಾರ್ವಜನಿಕ ವ್ಯಕ್ತಿಗಳು, ಉನ್ನತಾಧಿಕಾರಿಗಳು ಪರಿಚಯವಿದ್ದರೂ ಮಠಮಾನ್ಯರು, ಮಂತ್ರಿಮಹೋದಯರು ಇವರು ಏನೇ ಹೇಳಿದರೂ ನಡೆಸಿಕೊಡುವಷ್ಟು ಆತ್ಮೀಯರಾಗಿದ್ದರೂ ಅವರ ಪ್ರಭಾವವನ್ನು ಸ್ವಂತಕ್ಕೆ ಕುಟುಂಬದ ಪೋಷಣೆಗೆ ಎಂದೂ ಬಳಸಿಕೊಳ್ಳಲಿಲ್ಲ ಮತ್ತು ತಮಗೆ ದೊರೆತ ವಿಧಾನ ಪರಿಷತ್ ಸದಸ್ಯತ್ವ, ನಗರಸಭಾ ಅಧ್ಯಕ್ಷತೆ, ಸೆನೆಟ್ ಸದಸ್ಯತ್ವ ಮುಂತಾದ ಸ್ಥಾನಮಾನಗಳ ಪ್ರಭಾವಗಳನ್ನು ತಮಗಾಗಿ ಕಿಂಚಿತ್ತೂ ಬಳಸಿಕೊಳ್ಳಲಿಲ್ಲ.

ಕಾರಿನಲ್ಲಿ ಓಡಾಡುವಂಥ ಸಂಪತ್ತಿನ ಗಳಿಕೆಯನ್ನು ಅವರಿಗಿದ್ದ ಸ್ಥಾನಮಾನಗಳನ್ನು ಹೊಂದಿದ್ದ ಇತರರು ಬಳಸಿಕೊಂಡರೂ ಹಳಕಟ್ಟಿ ಅವರು ಬಳಸಿಕೊಳ್ಳಲಿಲ್ಲ. ಕೊನೆಯವರೆಗೂ ಸೈಕಲ್ ವೀರರಾಗಿಯೇ ತಿರುಗಾಡಿದರು. ಅವರ ಜೀವನದ ನಿರಂತರ ಸಂಗತಿ ಆಗಿತ್ತು. ಸೈಕಲ್ಲು ನಮ್ಮಲ್ಲಿ ಅವರಂತೆ ಸೈಕಲ್ಲನ್ನು ಸಾರ್ವಜನಿಕ ಸೇವೆಯಲ್ಲಿ ಬಳಸಿದವರು ಹಲವರುಂಟು.

ಬಾಡಿಗೆ ಮನೆಗಳಲ್ಲೇ ಬಾಳು ಕಳೆದವರು ಹಳಕಟ್ಟಿ ಅವರು. ಏಕೆಂದರೆ ಸ್ವಂತ ಮನೆ ವಾಸಕ್ಕಿಂತ ವಚನಶಾಸ್ತ್ರ ಸಾಹಿತ್ಯ ಸೇವೆಗಾಗಿ ಇದ್ದ ಮನೆಯನ್ನು ಮಾರಿ ಹಿತಚಿಂತಕರ ಮುದ್ರಣ ಶಾಲೆ ಪ್ರಾರಂಭಿಸಿದರು. ಇನ್ನು ಯಾರು ಏನೇ ಆರ್ಥಿಕ ಸಹಾಯ ಮಾಡಿದರೂ, ಸನ್ಮಾನ ಗೌರವಗಳ ಮೂಲಕ ಹಮ್ಮಿಣಿ ಅರ್ಪಿಸಿದರೂ ಅವೆಲ್ಲವನ್ನೂ ವಚನ ಸಾಹಿತ್ಯದ ಅಭಿವೃದ್ಧಿಗೆ ಬಳಸಿದರು. ಇದಕ್ಕೆ ಹತ್ತಾರು ನಿದರ್ಶನಗಳನ್ನು ನೀಡಬಹುದು.

ಒಮ್ಮೆ ನಾಗನೂರು ಶಿವಬಸವ ಸ್ವಾಮಿಗಳು ೧೯೫೬ರಲ್ಲಿ ಹಳಕಟ್ಟಿ ಅವರಿಗೆ ಆರ್ಥಿಕ ಸಹಾಯವನ್ನು ನೀಡುವ ಸಲುವಾಗಿ ಸನ್ಮಾನದ ನೆಪದಲ್ಲಿ ೫೦೦ ರೂ. ಹಮ್ಮಿಣಿ ಅರ್ಪಿಸಿದರು. ಆ ಕಾಲಕ್ಕೆ ಅದು ಸಾಕಷ್ಟು ದೊಡ್ಡ ಮೊತ್ತ. ಅದನ್ನು ಸ್ವೀಕರಿಸಿದ ಹಳಕಟ್ಟಿ ಅವರು ಹೇಳಿದ ಮಾತಿದು-

“ಈ ಸತ್ಕಾರದಲ್ಲಿ ಶಿವಬಸವಸ್ವಾಮಿಗಳು ಕೊಡಮಾಡಿದ ಹಣವನ್ನು ವಚನ ಸಾಹಿತ್ಯದ ಅಭಿವೃದ್ಧಿಗಾಗಿ ಉಪಯೋಗಿಸುವೆ.

ಶಿವಬಸವಸ್ವಾಮಿಗಳ ಈ ಸಹಾಯ ವಚನ ಸಾಹಿತ್ಯಕ್ಕಾಗಿ ನಾನು ಇನ್ನೂ ಹೆಚ್ಚಿನ ಆಸಕ್ತಿ ಮತ್ತು ಶಕ್ತಿಯಿಂದ ದುಡಿಯುವಂತೆ ಮಾಡಿದೆ."

ಅಪ್ಪಿತಪ್ಪಿಯೂ ಹಣದ ವಿಚಾರ ಬಂದಾಗ ತಮ್ಮ ಕುಟುಂಬದ ಚಿಂತನೆ ಮಾಡಿದವರಲ್ಲ. ಅಷ್ಟೇ ಏಕೆ ತಮ್ಮ ಚಿಂತನೆಯನ್ನು ಮಾಡಿದವರು ಅಲ್ಲ. ಅದಕ್ಕೆ ಸಾಕ್ಷಿ ಎಂದರೆ ಅವರ ವೇಷಭೂಷಣ. ಸಾಮಾನ್ಯವಾಗಿ ಅನೇಕ ಪ್ರಸಿದ್ಧ ವ್ಯಕ್ತಿಗಳನ್ನು ಕಂಡಾಗ ಅವರ ನಾನಾ ವೇಷಭೂಷಣದ ನಾನಾ ಭಾವಭಂಗಿಗಳ ಫೋಟೋಗಳನ್ನು ಕಾಣಬಹುದು. ಜರತಾರಿ ಶಲ್ಯ ಪಂಚೆ ಪೇಟಾಗಳಲ್ಲಿ ಇರುವ ದೃಶ್ಯ. ಹ್ಯಾಟು ಬೂಟು ಸೂಟುಗಳಲ್ಲಿ ಇರುವ ದೃಶ್ಯ ದರ್ಬಾರು ಡ್ರೆಸ್ಸುಗಳಲ್ಲಿ ಇರುವ ದೃಶ್ಯ ಇತ್ಯಾದಿ ಭಾವಭಂಗಿಗಳಲ್ಲಿ ಕಾಣಬಹುದು. ಆದರೆ ಹಳಕಟ್ಟಿ ಅವರದು ಜೀವನದುದ್ದಕ್ಕೂ ಒಂದೇ ವೇಷ, ಒಂದೇ ರೀತಿ ನಡೆನುಡಿ. ಶ್ರೀರಾಮನ ಬಗ್ಗೆ ತ್ಯಾಗರಾಜರು ಒಂದು ಮಾತನ್ನು ತಮ್ಮ ಕೀರ್ತನೆಯಲ್ಲಿ ಹೇಳುತ್ತಾರೆ, ಶ್ರೀರಾಮನದು "ಒಂದೇ ಮಾತು, ಒಂದೇ ಬಾಣ" ಅಂತೆಯೇ ಒಬ್ಬಳೇ ಸತಿ. ಹಾಗೆಯೇ ಒಂದೇ ವೇಷದವರು ಹಳಕಟ್ಟಿ ಅವರು. ಟಿ.ಎನ್. ಮಲ್ಲಪ್ಪನವರು ಹೇಳುವಂತೆ,

> ಬೆಳಗುತಿರೆ ಶಿರವನ್ನು ಪೇಟವದು ಬಿಳುಪಿನದು
> ಕಳೆಯೇರೆ ಕಣ್ಣೆನಲಿ ಕಣ್ಣಡಕವಿರುತಿರಲು
> ನಿಲುವಂಗಿ ಕಿಸೆಯೊಳಗೆ ಗಡಿಯಾರ ಹುದುಗಿರಲು
> ಬಿಳಿಪಂಚೆ ಬಿಳಿಜೋಡು ಗಂಭೀರದುಡುಗೆಯದು.

ಅವರ ಸರಳತನ ಸರಳ ಉಡುಪು ಮತ್ತು ವಚನಶಾಸ್ತ್ರದ ಕಳಕಳಿ ಬಗ್ಗೆ ಶ್ರೀ ವೀ.ಗ. ಶೀಲವಂತ ಅವರು ಹೇಳಿದ್ದು ನೆನಪಾಗುತ್ತದೆ. "ಸ್ವಾಮಿಗಳು ಹಳಕಟ್ಟಿ ಅವರನ್ನು ಭೇಟಿ ಆದಾಗ ಮಧ್ಯಾಹ್ನದ ಸಮಯ. ಅವರು ಧರಿಸಿದ ಚಿಂದಿ ಅರಿವೆಗಳು ಹಳಕಟ್ಟಿಯವರು ಎದುರಿಸುತ್ತಿರುವ ಬಡತನದ ಬೇಗುದಿಯನ್ನು ಸಾರಿ ಹೇಳುತ್ತಿದ್ದವು. ಹರಿದ ಅಂಗಿ, ಧೋತರ ಹೊಲಿಯುತ್ತಿರುವ ಹಳಕಟ್ಟಿಯವರನ್ನು ಕಂಡ ಸ್ವಾಮಿಗಳ ಹೃದಯ ಬಹಳ ನೊಂದಿತು. ದುಂಡಯ್ಯ ಶಾಸ್ತ್ರಿಗಳನ್ನು ಹೊರಗೆ ಕರೆದು ಹಳಕಟ್ಟಿಯವರಿಗೆ ಅಂಗಿಯ ಅರಿವೆ, ರುಮಾಲು, ಧೋತರ ಜೋಡಿಗಳನ್ನು ಪೇಟೆಯಿಂದ ಕೂಡಲೆ ತರಲು ಹೇಳಿ ಹಣ ಕೊಟ್ಟು ಕಳಿಸಿದರು. ಕುಶಲ ಸಂಭಾಷಣೆ, ವಚನ ಸಾಹಿತ್ಯದ ಪ್ರಗತಿಯ ಬಗ್ಗೆ ಹಳಕಟ್ಟಿ ಅವರೊಂದಿಗೆ ವಿಚಾರಿಸುತ್ತಾ ಕುಳಿತರು. ಅಷ್ಟರಲ್ಲಿ ಹೋದ ಶಾಸ್ತ್ರಿಗಳು ಅಂಗಿಯ ಅರಿವೆ ರುಮಾಲು ಧೋತರ ಜೋಡಿಗಳೊಂದಿಗೆ ಬಂದರು. ಅವುಗಳನ್ನು ಶಿವಬಸವಸ್ವಾಮಿಗಳು ಹಳಕಟ್ಟಿಯವರಿಗೆ ಅರ್ಪಿಸಿದರು. ಇವೆಲ್ಲ ಯಾಕ್ರೆಪ್ಪಾ, ಅದೇ ಹಣ ಇದ್ದರೆ ಕೆಲವೊಂದು ವಚನಗಳನ್ನಾದರೂ ಅಚ್ಚುಮಾಡಬಹುದಾಗಿತ್ತು ಎಂದು ಹಳಕಟ್ಟಿ ಅವರು." ಹೀಗಿತ್ತು ಅವರ ವಿಚಾರಧೋರಣೆ.

ಹಳಕಟ್ಟಿ ಅವರ ಉಡುಪು, ಬಡತನಗಳು ಅವರ ಆದರ್ಶ ಬದುಕಿನ ಪ್ರತಿನಿಧಿ ಆಗಿದ್ದವು. ಅವರು ಮನಸ್ಸು ಮಾಡಿದ್ದರೆ ಎಂದೋ ಪ್ರಭಾವಿತರಾಗಿ ಬಾಳುವೆ ನಡೆಸಬಹುದಿತ್ತು. ಆದರೆ ಆ ತರಹದ ವ್ಯಕ್ತಿ ಅವರೆಂದೂ ಆಗಿರಲಿಲ್ಲ.

ಸರ್ಕಾರಿ ಉದ್ಯೋಗರಂಗ

ಹಳಕಟ್ಟಿ ಅವರು ೧೯೦೪ರಲ್ಲಿ ಕಾಯಿದೆ ಪದವೀಧರರಾದ ಮೇಲೆ ಬೆಳಗಾಂವಿಯಲ್ಲಿ ವಕೀಲಿ ವೃತ್ತಿ ಕೈಗೊಂಡರು. ಅನಂತರ ಅವರು ಕಾರಣಾಂತರಗಳಿಂದ ವಿಜಾಪುರಕ್ಕೆ ಬಂದು ವಕೀಲಿ ವೃತ್ತಿ ಕೈಗೊಂಡರು. ೧೯೨೩ರಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಗವರ್ನ್‌ಮೆಂಟ್ ಪ್ಲೀಡರ್ ಆಗಿ ಸರ್ಕಾರದಿಂದ ನೇಮಕಗೊಂಡರು.

ಈ ಅವಧಿಯಲ್ಲಿ ಅವರಲ್ಲಿ ತಳವೂರಿದ್ದ ವಚನಶಾಸ್ತ್ರದ ಹಸ್ತಪ್ರತಿ ಸಂಗ್ರಹ ಪ್ರವೃತ್ತಿ ಪ್ರಬಲಗೊಂಡಿತು. ೧೯೦೧ರ ವೇಳೆಗೆ ಅವರಿಗೆ ವಚನ ಸಾಹಿತ್ಯ ಸಂಗ್ರಹದಲ್ಲಿ ಆಸಕ್ತಿ ಮೂಡಿತ್ತು. ಆತ್ಮಚರಿತ್ರೆಯಲ್ಲಿ ಹಳಕಟ್ಟಿ ಅವರೇ ಹೇಳಿಕೊಂಡಂತೆ,

೧೯೦೪ನೇ ಇಸ್ವಿಯಲ್ಲಿ ಎಲ್.ಎಲ್.ಬಿ ಪರೀಕ್ಷೆಗೆ ವಿಜಾಪುರಕ್ಕೆ ಬಂದ ಬಳಿಕ, "೧೯೧೮ ಇಸ್ವಿಯವರೆಗೂ ನನ್ನ ವಾಙ್ಮಯ ಸಂಶೋಧನ ಕಾರ್ಯಗಳನ್ನು ಎಡಬಿಡದೆ ಸಾಗಿಸಿಯೇ ಇದ್ದನು. ಈ ಕಾಲದಲ್ಲಿ ನನ್ನ ವ್ಯವಸಾಯಕ್ಕೋಸ್ಕರ ನನಗೆ ಬೇರೆ ಬೇರೆ ಗ್ರಾಮಗಳಿಗೆ ಹೋಗಬೇಕಿತ್ತು. ಆಗ ನನಗೆ ಅನೇಕ ಪುರಾತನ ಗ್ರಂಥಗಳು ಲಭ್ಯವಾದವು. ಅವುಗಳಲ್ಲಿ ಮಹತ್ವವಾದವುಗಳನ್ನು ನಾನು ಹಣ ಕೊಟ್ಟು ಕೊಳ್ಳಬೇಕಾಗಿತ್ತು. ಈ ಗ್ರಂಥಗಳು ಅನೇಕ ವಿಧದ ವಿಷಯಗಳನ್ನು ಉಳ್ಳವಾಗಿದ್ದವು. ಅವುಗಳನ್ನು ವಿಷಯಾನು ಸಾರವಾಗಿ ವರ್ಗೀಕರಣ ಮಾಡಿ ಅವುಗಳ ಪಟ್ಟಿಯನ್ನು ಮಾಡಿಟ್ಟು ಕೊಂಡಿದ್ದೇನೆ. ಈ ಗ್ರಂಥಗಳಲ್ಲಿ ಈಗ ಒಟ್ಟು ೩೧ ವರ್ಷಗಳಾಗಿದ್ದು

ಅವುಗಳ ಒಟ್ಟು ಗ್ರಂಥಸಂಖ್ಯೆ ೯೫೧ ಇದೆ. ಇವು ಒಟ್ಟು ೩.೨೭ ಪೊತ್ತಿಗೆಗಳ ಕಟ್ಟುಗಳಲ್ಲಿ ಸಮಾವೇಶವಾಗಿದೆ."

ಕೇವಲ ತಾಳೆಗರಿಗಳನ್ನು ಸಂಗ್ರಹಿಸುವ ಕಾರ್ಯವಷ್ಟೇ ಅವರು ಮಾಡುತ್ತಿರಲಿಲ್ಲ. "ಉಪಜೀವನಕ್ಕಾಗಿ ಕೈಕೊಂಡ ವಕೀಲಿ ವೃತ್ತಿಯ ವಿವಿಧ ಕಾರ್ಯಗಳು ಮುಗಿದ ಬಳಿಕ ಹಳಕಟ್ಟಿ ಅವರು ತಾವು ವಾಚನಕ್ಕೆ ಆಯ್ದುಕೊಳ್ಳುತ್ತಿದ್ದ ಒಂದೊಂದೇ ತಾಳೆಗರಿಯ ಹಸ್ತಪ್ರತಿಯ ಸಾಹಿತ್ಯವನ್ನು ಕಾಗದ ಮೇಲೆ ಬರೆದು ತೆಗೆಯುತ್ತಿದ್ದರು. ವಚನಗಳಲ್ಲಿ ಕೆಲವೊಮ್ಮೆ ಕಂಡುಬರುತ್ತಿದ್ದ ಸ್ಥಲಕ್ಕನುಗುಣವಾದ ವಚನಗಳನ್ನು ವರ್ಗೀಕರಿಸುತ್ತಿದ್ದರು, ವಿಭಜಿಸುತ್ತಿದ್ದರು. ತುಳಿ ಮಾಡಿ ನೋಡಿ ಶುದ್ಧಾಶುದ್ಧತೆ, ಭಗ್ನತೆ ಶೈಥಿಲ್ಯ ಮುಂತಾದವುಗಳನ್ನು ನೀಗಿಕೊಂಡು ಶುದ್ಧ ಹಸ್ತಪ್ರತಿ ಸಿದ್ಧಪಡಿಸುತ್ತಿದ್ದರೆ, ಕೆಲವೊಮ್ಮೆ ಹಸ್ತಪ್ರತಿಯಲ್ಲಿ ಕಾಣುತ್ತಿದ್ದ ಟೀಕೆ ವ್ಯಾಖ್ಯೆಗಳನ್ನು ಗಮನಿಸಿ ಟಿಪ್ಪಣಿ ಬರೆದಿಡುತ್ತಿದ್ದರು."

ಹಳಕಟ್ಟಿ ಅವರ ಈ ಸಂಶೋಧನಾ ಪ್ರವೃತ್ತಿ ಮತ್ತು ಬಂದ ಕಕ್ಷಿದಾರರನ್ನು ತಾಳೆಗರಿಗಳಿಗಾಗಿ ವಿಚಾರಿಸುತ್ತಿದ್ದ ಪ್ರವೃತ್ತಿ ಟೀಕೆಗೂ ಒಳಗಾಯಿತು.

ದೇವೇಂದ್ರಕುಮಾರ ಹಕಾರಿ ಅವರು ತಿಳಿಸಿರುವಂತೆ "ಈತನೆಂಥ ವಕೀಲ? ಅಲ್ಲಲ್ಲಿ ಖಟ್ಲೆಗೆ ಸಂಬಂಧಿಸಿದ ಮಾಹಿತಿ ವಿವರ ಮುಖತಃ ಸಂಗ್ರಹಿಸಲು ಬಂದಾಗ, ಹಸ್ತಪ್ರತಿಗಳಿಗಾಗಿಯೇ ವಿಚಾರಿಸುತ್ತ ವ್ಯರ್ಥವಾಗಿ ಕಾಲಹರಣ ಮಾಡುತ್ತಾನೆ" ಎಂಬ

ಮಾತುಗಳು ಕೇಳಿಬಂದರೂ ಇದಾವುದನ್ನು ಹಳಕಟ್ಟಿಯವರು ತಲೆಗೆ ಹಚ್ಚಿಕೊಳ್ಳಲಿಲ್ಲ.

"ವಚನ ಸಾಹಿತ್ಯದ ಕೆಲಸವನ್ನೇ ಹೆಚ್ಚು ಉತ್ಸಾಹದಿಂದ ಹಳಕಟ್ಟಿ ಅವರು ಮುಂದುವರೆಸಿದುತೆಲ್ಲಾ ಈ ಮಹತ್ವದ ಸಾಹಿತ್ಯದ ಪ್ರಕಟನೆಗಾಗಿ ನನ್ನ ಸಂಪೂರ್ಣ ಲಕ್ಷ್ಯವನ್ನು ಪೂರೈಸಲು ಸಾಧ್ಯವಾಗ ?ೇಕು ಎಂದು ಕ್ರಮೇಣವಾಗಿ ವಕೀಲಿ ವೃತ್ತಿಯನ್ನೇ ತ್ಯಜಿಸದೆ" ಎಂದಿದ್ದಾರೆ ಹಳಕಟ್ಟಿ ಅವರು. ಅವರು ಪಬ್ಲಿಕ್ ಪ್ರಾಸಿಕ್ಯೂಟ ರಾಗಿಯೇ ಮುಂದುವರೆದಿದ್ದರೆ ಜಿಲ್ಲಾ ನ್ಯಾಯಧೀಶರಾಗ ಬಹುದಿತ್ತು. ಆದರೆ ಅಧಿಕಾರದ ಆಸೆ ಅವರಿಗಿರಲಿಲ್ಲ. ಅವರ ಮನಸ್ಸೆಲ್ಲವನ್ನು ವಚನ ಸಾಹಿತ್ಯ ಆಕ್ರಮಿಸಿತ್ತು.

ಹೀಗೆ ವಕೀಲಿ ವೃತ್ತಿ ತ್ಯಜಿಸಿದ ಮೇಲೆ ವಚನ ಸಾಹಿತ್ಯ ಪ್ರಕಟನೆಗಾಗಿಯೇ ೧೯೨೬ರಲ್ಲಿ ಹಿತಚಿಂತಕ ಎಂಬ ಮುದ್ರಣಾಲಯವನ್ನು ಸ್ಥಾಪಿಸಿದರು. ಅದೇ ಸಮಯದಲ್ಲಿ ಶಿವಾನುಭವವೆಂಬ ಪತ್ರಿಕೆಯನ್ನು ಆರಂಭಿಸಿದರು.

ಶಿವಾನುಭವ ಪತ್ರಿಕೆ

ಕನ್ನಡದಲ್ಲಿ ಶರಣ ಸಾಹಿತ್ಯದ ಪ್ರಸಾರಕ್ಕೆ ಮೀಸಲಾದ ಹಲವಾರು ಪತ್ರಿಕೆಗಳು ಇವೆ. ಅವುಗಳಲ್ಲಿ ಇಂದಿಗೂ ಅಪೂರ್ವ ಸೇವೆ ಸಲ್ಲಿಸಿದ ಪತ್ರಿಕೆಗಳ ಪೈಕಿ ಶಿವಾನುಭವ ಪತ್ರಿಕೆ ಅಪೂರ್ವ ವಾದುದು. ಈ ಪತ್ರಿಕೆಯಿಂದ ಕನ್ನಡ ಸಾಹಿತ್ಯಕ್ಕೆ ದೊರೆತ ಕೊಡುಗೆಗಳು ಅನನ್ಯವಾದವು.

ಹಳಕಟ್ಟಿ ಅವರೇ ಈ ಬಗ್ಗೆ ಹೇಳಿಕೊಂಡಿರುವ ಮಾತುಗಳು ಗಮನಾರ್ಹವಾಗಿವೆ.

'ಶಿವಾನುಭವ' ಎಂಬ ಹೆಸರನ್ನು ಏಕೆ ಇಡಲಾಯಿತು ಎಂಬುದನ್ನು ಹೀಗೆ ತಿಳಿಸಿದ್ದಾರೆ. "ಶಿವಶರಣರ ತತ್ತ್ವಗಳ ಉದ್ದೇಶವು ಶಿವನ ಅನುಭವ ಎಂದರೆ ಶಿವನನ್ನು ಕಾಣುವುದು ಅಥವಾ ಅರಿಯುವುದು, ಇದೇ ಮುಖ್ಯವಾದ್ದರಿಂದಲೂ ಬಸವಾದಿ ಪ್ರಮಥರು ಕಲ್ಯಾಣಪಟ್ಟಣದಲ್ಲಿದ್ದಾಗ ತಮ್ಮ ಶರಣರ ಕೂಟಕ್ಕೆ 'ಶಿವಾನುಭವ ಮಂಟಪ' ಎಂಬ ಹೆಸರನ್ನು ಇಟ್ಟಿದ್ದರಿಂದಲೂ ನಾನು ಈ ಪತ್ರಿಕೆಗೆ 'ಶಿವಾನುಭವ' ಎಂಬ ಹೆಸರನ್ನು ಇಟ್ಟೆನು. ಇಂಗ್ಲೀಷ್ ಭಾಷೆಯಲ್ಲಿ ಶಿವಾನುಭವ ತತ್ತ್ವವನ್ನು ಮಿಸ್ಟಿಸಿಜಂ ಎಂದು ಕರೆಯಬಹುದು. ಈ ಇಂಗ್ಲಿಷ್ ಶಬ್ದವು ಅದರ ಸ್ವರೂಪವನ್ನು ಚೆನ್ನಾಗಿ ವಿವರಿಸುವಂಥದ್ದಿರುತ್ತದೆ."

"ನಾನು ಕಳೆದ ೨೫ ವರ್ಷಗಳಲ್ಲಿ ಈ ಪತ್ರಿಕೆ ಮೂಲಕ ಒಟ್ಟು ೭೫ ಗ್ರಂಥಗಳನ್ನು ಪ್ರಕಟಿಸುವ ಕಾರ್ಯ ಮಾಡಿದ್ದೇನೆ. ಈ ಎಲ್ಲ ಗ್ರಂಥಗಳು ಪುರಾತನ ಮೂಲ ಗ್ರಂಥಗಳಾಗಿವೆ. ಇವುಗಳೆಲ್ಲವುಗಳ ಒಟ್ಟು ಪುಟಗಳ ಸಂಖ್ಯೆ ೮೦೬೫ ಇರುತ್ತದೆ. ಪ್ರತಿ ಸಂಚಿಕೆಗೆ ನನ್ನ ಮತ್ತು ಅನ್ಯರ ಲೇಖನಗಳು ಬರೆದಿದ್ದನ್ನು ಸೇರಿಸಿದರೆ ೨೬ ವರ್ಷಗಳ ಅವಧಿಯಲ್ಲಿ ಶಿವಾನುಭವದ ಪುಟಗಳು ೧೨೦೦೦ ಆಗುತ್ತದೆ."

ಇಷ್ಟು ಸಾವಿರಾರು ಪುಟಗಳ ಅಪಾರ ಸಾಹಿತ್ಯವನ್ನು ಸಂಶೋಧಿಸಿ ಪ್ರಕಟಿಸಲು ಹಳಕಟ್ಟಿ ಅವರಿಗೆ ಹೇಗೆ ಸಾಧ್ಯವಾಯಿತು ಎಂಬುದಕ್ಕೆ ಅವರೇ ವಿವರ ನೀಡಿದ್ದಾರೆ.

"ನಾನು ಈ ಅವಧಿಯಲ್ಲಿ ಹೊರಗಿನ ಬೇರೆ ಯಾವ ಚಳುವಳಿಯಲ್ಲೂ ಸೇರಿಕೊಂಡಿರುವುದಿಲ್ಲ. ಆದರೆ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳು ಅಂದರೆ ಮುಂಬಯಿ ವಿಶ್ವವಿದ್ಯಾಲಯ ಅಥವಾ ವಿಜಾಪುರ ಮುನಿಸಿಪಲ್ ಸ್ಕೂಲ್ ಬೋರ್ಡ್ ಇವುಗಳಲ್ಲಿ ಮಾತ್ರ ಸಭಾಸದನಾಗಿ ಕಾರ್ಯ ಮಾಡಿದ್ದೇನೆ... ನಾನು ಈ ಅವಧಿಯಲ್ಲಿ ಬಹುಶಃ ವ್ಯಾಖ್ಯಾನಗಳಿಗೋಸ್ಕರ ಪರ ಊರುಗಳಿಗೆ ಹೋಗಿರುವುದಿಲ್ಲ. ಒಂದು ವೇಳೆ ನಾನು ಹೋಗುವ ಪರಿಸ್ಥಿತಿಯನ್ನು ಇಟ್ಟುಕೊಂಡಿದ್ದರೆ ನನ್ನ ಕಾಲ ವ್ಯಯವಾಗುತ್ತಿತ್ತು. ಇದರಿಂದ ಪ್ರೆಸ್ಸಿನ ಕಾರ್ಯಗಳಿಗೆ ವ್ಯತ್ಯಯ ಒಂದು ನನಗೆ ಹಾನಿಯಾಗುತ್ತಿತ್ತು. ಈ ಕಾಲದಲ್ಲಿ ಪರ ಗ್ರಾಮಗಳಿಗೆ ಹೋಗಲೇ ಬೇಕಾದರೆ ಅಲ್ಲಿ ಕೆಲಸ ತೀರಿದ ಕೂಡಲೇ ಒಂದು ದಿನವಾದರೂ ಕಳೆಯದೆ ವಿಜಾಪುರಕ್ಕೆ ಹಿಂದಿರುಗಿ ಬರುತ್ತಿದ್ದೆನು. ಇಷ್ಟೇ ಅಲ್ಲ, ಆ ಪಟ್ಟಣಗಳಲ್ಲಿರುವ ನೋಡತಕ್ಕ ಸ್ಥಳಗಳನ್ನು ಸಹ ನಾನು ನೋಡುವುದರಲ್ಲಿ ವೇಳೆ ಕಳೆಯುತ್ತಿದ್ದಿಲ್ಲ. ನಾನು ಬೆಂಗಳೂರು, ಮೈಸೂರು ಮೊದಲಾದ ಕೆಲವು ಪಟ್ಟಣಗಳಿಗೆ ಹೋಗಿದ್ದರೂ ಅವುಗಳಲ್ಲಿ ನೋಡತಕ್ಕ ಸ್ಥಳಗಳನ್ನು ಸಹ ನಾನು ಇನ್ನೂ ಪೂರ್ಣವಾಗಿ ನೋಡಿರುವುದಿಲ್ಲ. ನಾನು ವಿಜಾಪುರದಲ್ಲಿ

ನಾಲ್ಕೆಂಟು ಬಾರಿ ಮಾತ್ರ ಸಿನಿಮಾ ಗೃಹಗಳಿಗೆ ಹೋಗಿದ್ದೇನೆಯೇ ಹೊರತು ಹೆಚ್ಚು ಬಾರಿ ನೋಡಲಿಕ್ಕೆ ಹೋಗಿರುವುದಿಲ್ಲ. ಆದರೆ ಹೊರಗಿನಿಂದ ವ್ಯಾಖ್ಯಾನಕಾರರು ವಿಜಾಪುರಕ್ಕೆ ಬಂದಿದ್ದರೆ ಅಥವಾ ಇಲ್ಲಿ ಬೇರೆ ಸಭಾಕಾರ್ಯಗಳು ಜರುಗುತ್ತಿದ್ದರೆ ಮಾತ್ರ ನಾನು ಅವುಗಳಿಗೆ ತಪ್ಪದೆ ಹೋಗುತ್ತಿರುತ್ತೇನೆ. ಆದರೂ ಒಕ್ಕಲುತನ ಸುಧಾರಣೆ ಅಥವಾ ಸಹಕಾರಿ ಸಂಘಗಳು ಇಂಥ ಉಪಯುಕ್ತ ಚಟುವಟಿಕೆ ಗಳಲ್ಲಿ ಭಾಗವಹಿಸುವ ಪರಿಧಿಗಳಿಗೆ ಒದಗಿದರೆ ಅವುಗಳಿಂದ ನಾನು ಧೂರ ಇರುವುದಿಲ್ಲ. ಈ ಪ್ರಕಾರ ನಾನು ಹೋದ ೨೫ ವರ್ಷಗಳಿಂದ ವಾಙ್ಮಯ ಕಾರ್ಯ ಮಾಡುತ್ತ ಬಂದಿದ್ದರಿಂದ ಮೇಲೆ ವಿವರಿಸಿದಂತೆ ನನ್ನಿಂದ ಕೆಲಮಟ್ಟಿಗಾದರೂ ಕಾರ್ಯಗಳು ಜರುಗಿರುತ್ತವೆ."

'ಛಲಬೇಕು ಶರಣಂಗೆ' ಎಂಬ ಮಾತು ನೆನಪಾಗುತ್ತದೆ. ಹಳಕಟ್ಟಿ ಅವರ ಮೇಲಿನ ಮಾತುಗಳನ್ನು ಓದಿದಾಗ ಒಬ್ಬ ತಪಸ್ವಿಯಂತೆ ವಚನಶಾಸ್ತ್ರ ಪ್ರಕಟನೆಗೆ ಸಂಶೋಧನೆಗೆ ಹಗಲಿರುಳು ಹೇಗೆ ದುಡಿದಿದ್ದಾರೆ ಎಂಬ ಚಿತ್ರಣ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಈ ರೀತಿಯ ದುಡಿಮೆ ಶ್ರದ್ಧೆ ನಿಷ್ಠೆ ಇಂದೂ ಎಲ್ಲರಿಗೂ ಮಾದರಿ ಆಗಿದೆ.

೧೯೨೬ರಲ್ಲಿ ಪ್ರಾರಂಭವಾದ ಶಿವಾನುಭವ ಮೊದಲಿನ ಮೂರು ವರ್ಷ ತ್ರೈಮಾಸಿಕವಾಗಿ ಬಳಿಕ ೨ ವರ್ಷ ಮಾಸಿಕವಾಗಿ ಆಮೇಲೆ ೫ ವರ್ಷ ದ್ವೈಮಾಸಿಕವಾಗಿ ರೂಪ ಬದಲಿಸಿಕೊಳ್ಳುತ್ತ

ಬಂದು, ಅನಂತರ ಮಾಸಿಕವಾಗಿ ಮುಂದುವರೆದು ೩೫ ವರ್ಷಗಳ ಕಾಲ ನಡೆದು ೧೯೬೧ರಲ್ಲಿ ೩೫ನೇ ಸಂಪುಟದ ೧-೨ ಸಂಯುಕ್ತ ಸಂಚಿಕೆಯೊಡನೆ ನಿಂತು ಹೋಯಿತು. ಆಗ ಹಳಕಟ್ಟಿ ಅವರಿಗೆ ೮೧ ವರ್ಷ ವಯಸ್ಸು. ಈ ಅವಧಿಯಲ್ಲಿ ಈ ಪತ್ರಿಕೆ ಸಲ್ಲಿಸಿದ ಸೇವೆ ಅಜರಾಮರ. ಸ.ಸ. ಮಾಳವಾಡರು ಹೇಳುವಂತೆ, "ಈ ಪತ್ರಿಕೆ ಮೂಲಕ ಬಳಕೆಗೆ ಬಂದ ಸಾಮಗ್ರಿ ವಿಫುಲವೂ ಮೌಲಿಕವೂ ಆಗಿದೆ. ಇಂದಿಗೂ ನಮ್ಮ ವಿಶ್ವವಿದ್ಯಾಲಯಗಳು, ವಿದ್ವತ್ ಸಂಸ್ಥೆಗಳು ವಿದ್ವಾಂಸರು ಡಾ. ಹಳಕಟ್ಟಿ ಸಂಗ್ರಹಿಸಿದ ಭಂಡಾರವನ್ನು ಬಳಸುತ್ತಿರುವುದುಂಟು."

ನಮ್ಮ ನಾಡಿನ ಹಿರಿಯ ವಿದ್ವಾಂಸರಾದ ಡಾ. ರಂ.ರಾ. ದಿವಾಕರ, ಪ್ರೊ. ಶಿ.ಶಿ. ಬಸವನಾಳ, ಎಂ.ಆರ್.ಶ್ರೀ, ಚನ್ನಪ್ಪ ಉತ್ತಂಗಿ ಮೊದಲಾದವರು ಹಳಕಟ್ಟಿ ಅವರ ವ್ಯಾಸಂಗದಿಂದ ಪ್ರೇರಿತರಾಗಿ ವಚನ ಸಾಹಿತ್ಯದ ಬಗೆಗೆ ಮಹತ್ವಪೂರ್ಣ ಕೃತಿಗಳನ್ನು ರಚಿಸಿದರು. ಅವು ಹೊಸ ತಲೆಮಾರಿಗೆ ವ್ಯಾಸಂಗಕ್ಕೆ ಪ್ರಚೋದನೆ ಒದಗಿಸಿದವು. ಹೀಗೆ ಡಾ. ಹಳಕಟ್ಟಿ ಅವರು ಶಿವಾನುಭವದ ಮೂಲಕ, ವಚನ ಸಾಹಿತ್ಯದ ದಿಸೆಯಲ್ಲಿ ಪರಮಗುರು ಸ್ವರೂಪ ರಾಗಿದ್ದಾರೆ. ಅವರನ್ನು **ವಚನ ಪಿತಾಮಹ** ಎಂದು ಸಂಬೋಧಿಸುವುದು ಸಮರ್ಪಕವಾಗಿದೆ.

ಸಾರ್ವಜನಿಕ ಸೇವಾರಂಗ

ಹಳಕಟ್ಟಿ ಅವರು ಶಿವಾನುಭವ ಪತ್ರಿಕೆ ನಡೆಸುತ್ತ ವಚನಶಾಸ್ತ್ರ ಸಂಶೋಧನೆ ನಡೆಸುತ್ತ ವಕೀಲಿ ವೃತ್ತಿಯನ್ನು ಮಾಡುತ್ತಾ ಇದ್ದವರು

ಅನಂತರ ಜತೆಜತೆಯಲ್ಲೇ ವಿವಿಧ ಸಂಘಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದುದು ಅವರ ಹಿರಿಮೆಗಳಲ್ಲಿ ಒಂದಾಗಿದೆ.

ನಮ್ಮಲ್ಲಿ ಸಂಶೋಧಕರು ತಮ್ಮ ವ್ಯಾಸಂಗದಲ್ಲಿ ನಿರತರಾಗಿ ಸಾರ್ವಜನಿಕ ಸೇವೆಗೆ ಬರುವುದಿಲ್ಲ. ಸಾರ್ವಜನಿಕ ಸೇವೆಯಲ್ಲಿ ನಿರತರಾದವರಿಗೆ ವ್ಯಾಸಂಗ-ಸಂಶೋಧನ ದೂರದ ಮಾತು. ಅಷ್ಟೇಕೆ ಎಷ್ಟೋ ಸಾರ್ವಜನಿಕ ಸೇವಾಧುರೀಣರಾಗಿ ಓದಲು ಪುರಸೊತ್ತು ಇರುವುದಿಲ್ಲ, ಆಸಕ್ತಿಯೂ ಇರುವುದಿಲ್ಲ. ಇದ್ದರೂ ಗಾಢವಾದ ಅಧ್ಯಯನ ಆಗಿರುವುದಿಲ್ಲ. ಇನ್ನು ಸಂಶೋಧಕರು, ಸಾರ್ವಜನಿಕ ಸೇವಾಧುರೀಣರೂ ಆಗಿದ್ದು ನಾನಾ ಸಂಸ್ಥೆಗಳಲ್ಲಿ ನಾನಾ ಬಗೆಯ ಸೇವೆ ಸಲ್ಲಿಸುವುದಂತೂ ಅಪರೂಪ. ಇಂಥ ಅಪರೂಪದ ವ್ಯಕ್ತಿ ಫ.ಗು. ಹಳಕಟ್ಟಿ ಅವರು. ಅವರ ಸಾರ್ವಜನಿಕ ಸೇವೆ ಮುಮ್ಮುಖವಾದುದು.

ಶಿಕ್ಷಣ ರಂಗಕ್ಕೆ ಅವರಿತ್ತ ಕೊಡುಗೆ ಅಪೂರ್ವವಾದುದು. ಹಳಕಟ್ಟಿ ಅವರು ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸಲು ಬಂದಾಗ ಕನ್ನಡದ ಸ್ಥಿತಿ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ವಿಜಾಪುರದಲ್ಲಿ ಹೇಗಿತ್ತು ಎಂಬುದನ್ನು ಡಾ. ಬಿ.ಎಂ. ಪಾಟೀಲರು ಹೀಗೆ ಬಣ್ಣಿಸಿದ್ದಾರೆ:

"ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೇ ಶತಮಾನದ ಆರಂಭದ ಅವಧಿಯನ್ನು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಕತ್ತಲೆ ಕವಿದ ಅವಧಿ ಎಂದು

ಹೇಳಬಹುದಾಗಿದೆ. ಉತ್ತರ ಕರ್ನಾಟಕದ ಜನರಂತೂ ತಮ್ಮ ವಿದ್ಯಾಭ್ಯಾಸಕ್ಕೆ ದೂರದ ಮಹಾರಾಷ್ಟ್ರಕ್ಕೆ ಹೋಗಬೇಕಿತ್ತು. ಮರಾಠಿಗರ ಕಪಿಮುಷ್ಠಿಗೆ ಸಿಕ್ಕು ಕನ್ನಡಿಗರು ಎಲ್ಲ ವಿಧದಲ್ಲಿಯೂ ಹಿಂದಿದ್ದರು. ಓದಿದರೆ ಮರಾಠಿ ಪುಸ್ತಕಗಳನ್ನೇ ಓದುವುದು, ಖರೀದಿಸಿದರೆ ಮರಾಠಿ ಪತ್ರಿಕೆಗಳನ್ನೇ ಖರೀದಿಸುವುದು; ನೋಡಿದರೆ ಮರಾಠಿ ನಾಟಕಗಳನ್ನೇ ನೋಡುವುದು, ಕೇಳಿದರೆ ಮರಾಠಿ, ಹಿಂದೂಸ್ತಾನಿ ಸಂಗೀತವನ್ನೇ ಕೇಳುವುದು ಅಂದಿನ ಕಾಲದಲ್ಲಿ ಅನಿವಾರ್ಯವಾಗಿತ್ತು."

ಇಂಥ ಶೋಚನೀಯ ಕನ್ನಡದ ಸ್ಥಿತಿಯನ್ನು ಹೋಗಲಾಡಿಸಲು ಹಳಕಟ್ಟಿ ಅವರು ಕೈಗೊಂಡ ಕ್ರಮಗಳನ್ನು ಬೆಂಗಳೂರಿನಂಥ ನಗರಗಳಲ್ಲಿ ಇಂದೂ ಕೈಗೊಳ್ಳಬೇಕಾಗಿದೆ. ಹಳಕಟ್ಟಿ ದಾರಿಯಲ್ಲಿ ಸರ್ಕಾರ-ಸಾರ್ವಜನಿಕ ಸಂಸ್ಥೆಗಳು ಮುಂದುವರೆದಿದ್ದರೆ ಇಂದು ಅನೇಕ ಕನ್ನಡ ಸಮಸ್ಯೆಗಳೇ ಇರುತ್ತಿರಲಿಲ್ಲ ಎನ್ನಬಹುದು.

ವಿಜಾಪುರದಲ್ಲಿ ಕನ್ನಡದ ಪ್ರಚಾರ ಪ್ರಸಾರಗಳಿಗೆ ಅವರು ಹಲವಾರು ಕ್ರಮಗಳನ್ನು ಕೈಗೊಂಡರು. "ವಿಜಾಪುರ ಪಟ್ಟಣದ ವರ್ತಕರ ಮನೆಮನೆಗೆ ಅಡ್ಡಾಡಿ ಕನ್ನಡ ಭಾಷೆಯ ಮಹತ್ವವನ್ನು ತಿಳಿಸಿದರು.

ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣ ಕೊಡಿಸುವಂತೆ ತಂದೆತಾಯಿಗಳ ಮನಸ್ಸನ್ನು ಒಲಿಸಿದರು.

ಅಂಗಡಿ ಲೆಕ್ಕಪತ್ರಗಳನ್ನು ಕನ್ನಡದಲ್ಲಿಯೇ ಬರೆದಿಡಲು ಆಗ್ರಹಿಸಿದರು. ಕನ್ನಡ ಭಾಷೆಯ ಬೆಳವಣಿಗೆಗೆ ಹಳಕಟ್ಟಿ ಅವರು ಬಹುತರವಾಗಿ ಶ್ರಮಿಸಿದರು. ಅದರಿಂದಲೇ ಇಂದು ವಿಜಾಪುರ ಕನ್ನಡಮಯವಾಗಿದೆ."

ಹಳಕಟ್ಟಿ ಅವರ ಕಾಲದಲ್ಲಿ ವಿಜಾಪುರ ನಗರ ಸಭೆಯ ಶಾಖಾ ಮಂಡಲದಲ್ಲಿ ೫ ವರ್ಷಗಳ ಅಧ್ಯಕ್ಷರಾದಾಗ ಅವರು ಸಾಧಿಸಿದ ಸಾಧನೆ ಎಂದರೆ ೫ ವರ್ಷಗಳಾನಂತರದಲ್ಲಿ ಮೂರು ಕನ್ನಡ ಗಂಡು ಮಕ್ಕಳ ಶಾಲೆಗಳು ಇದ್ದದ್ದು, ೩ ಕನ್ನಡ ಹೆಣ್ಣುಮಕ್ಕಳ ಶಾಲೆಗಳು, ೭ ಕನ್ನಡ ಗಂಡು ಮಕ್ಕಳ ಶಾಲೆಗಳು ಆದವು. ಹಾಮಾನಾ ಈ ಬಗ್ಗೆ ಹೇಳಿದ ಮಾತು ಮನನೀಯವಾಗಿದೆ: "ಇಂಥ ಸಾಮಾಜಿಕ ಕೆಲಸಗಳು ನಡೆದಾಗಲೇ ಕನ್ನಡ ಬದುಕುತ್ತದೆ. ಎಂದಿಗಿಂತ ಇಂದು ಕರ್ನಾಟಕದಲ್ಲಿ ಊರಿಗೆ ಒಬ್ಬ ಹಳಕಟ್ಟಿ ಬೇಕಾಗಿದ್ದಾರೆ."

ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ವಿಶೇಷ ಪ್ರಾಶಸ್ತ್ಯವನ್ನು ಹಳಕಟ್ಟಿ ಅವರು ನೀಡಿದರು. ಅದಕ್ಕೆ ಆಕಾಶವಾಣಿಯಲ್ಲಿ ಮಾಡಿದ ಭಾಷಣದ ಮಾತುಗಳೇ ನಿದರ್ಶನವಾಗಿದೆ.

"ಶಾಲಾ ಸಮಿತಿಯ ಅಧ್ಯಕ್ಷನಾದ ಈ ಅವಧಿಯು ನನ್ನ ಜೀವನದ ಅತ್ಯುತ್ತಮ ಭಾಗವೆಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ರಾಷ್ಟ್ರೀಯ ಕೆಲಸವನ್ನು ಪ್ರಾರಂಭಿಸಬೇಕಾದರೆ ಅದು ಪ್ರಾಥಮಿಕ ಶಾಲೆಗಳಿಂದಲೇ ಪ್ರಾರಂಭವಾಗಬೇಕು ಎಂದು ನನ್ನ ಅಭಿಪ್ರಾಯವಾಗಿದೆ." ಈ ದೃಷ್ಟಿಯ ಹಳಕಟ್ಟಿ ಅವರು

೧೯೧೦ರಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯನ್ನು ಆರಂಭಿಸಿದರು. ಈ ಸಂಸ್ಥೆ ೧೯೧೪ರಲ್ಲಿ ಮಿಷನ್ ಹೈಸ್ಕೂಲನ್ನು ತೆಗೆದುಕೊಂಡು ೧೯೧೬ರಲ್ಲಿ ಶ್ರೀ ಸಿದ್ಧೇಶ್ವರ ಪ್ರಾಥಮಿಕ ಶಾಲೆಯಾಗಿ ತರುವಾಯ ಮಾಧ್ಯಮಿಕ ಶಾಲೆಯಾಗಿ ರೂಪುಗೊಂಡಿತು. ಅನಂತರ ಉನ್ನತ ಮಾದರಿಯ ವಿದ್ಯಾಸಂಸ್ಥೆಯಾಯಿತು.

ಕೇವಲ ಪ್ರಾಥಮಿಕ ಹೈಸ್ಕೂಲ್ ಶಾಲೆಗಳನ್ನಷ್ಟೆ ಅಲ್ಲದೆ ಕಾಲೇಜುಗಳನ್ನು ಸ್ಥಾಪಿಸಿ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಿದಾರೆ. ಬೆಳಗಾವಿ ಲಿಂಗರಾಜ ಕಾಲೇಜು, ಬಾಗಲಕೋಟೆ ಬಸವೇಶ್ವರ ಕಾಲೇಜುಗಳ ಹುಟ್ಟಿಗೂ ಕಾರಣಕರ್ತರಾಗಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ನಾಂದಿ ಹಾಡಿದವರು ಹಳಕಟ್ಟಿ ಅವರು. ೧೯೨೬ರಲ್ಲಿ ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ ಬಗ್ಗೆ ತಮ್ಮ ಕನಸನ್ನು ಹೀಗೆ ವಿವರಿಸಿದ್ದಾರೆ: “ಉತ್ತರ ಕರ್ನಾಟ ನಿಸರ್ಗ ಸಂಪತ್ತನ್ನು ಹೊಂದಿದೆ. ಕಾರವಾರ ಸಮುದ್ರಕ್ಕೆ ಬಂದರವಿದೆ. ಅದಕ್ಕೆ ಹೊದಿಕೊಂಡು ವಿಸ್ತಾರವಾದ ಅರಣ್ಯವಿದೆ. ಬಾಗಲಕೋಟೆಯಿಂದ ತಾಳೀಕೋಟೆ ವರೆಗೆ ಸುಣ್ಣದ ಹರಳುಗಳ ಗುಪ್ತನಿಧಿಯಿದೆ. ಆದುದರಿಂದ ಈ ಭಾಗಕ್ಕೆ ವಿಶ್ವವಿದ್ಯಾಲಯವೊಂದು ಸ್ಥಾಪನೆ ಆಗಬೇಕು. ಆದರೆ ಅದು ಉಳಿದ ವಿಶ್ವವಿದ್ಯಾಲಯದಂತೆ ಹೆಸರಿಗೆ ಮಾತ್ರ ವಿಶ್ವವಿದ್ಯಾಲಯವಾಗಕೂಡದು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ

ದಂತೆ ಔದ್ಯೋಗಿಕ ಮತ್ತು ವೈಜ್ಞಾನಿಕ ಹಿನ್ನೆಲೆಗಳನ್ನು ಒಳಗೊಂಡು ಮುನ್ನಡೆವ ವಿಶ್ವವಿದ್ಯಾಲಯವಾಗಬೇಕು." ಹೀಗೆ ಪ್ರಾಥಮಿಕ ಶಾಲೆಯಿಂದ ಹಿಡಿದ ವಿಶ್ವವಿದ್ಯಾಲಯದವರೆಗೆ ಉತ್ತರ ಕರ್ನಾಟಕದ ಶಿಕ್ಷಣ ರಂಗದಲ್ಲಿ ವಿಶೇಷ ಸೇವೆ ಸಲ್ಲಿಸಿದ ಶಿಕ್ಷಣ ಪಿತಾಮಹರಲ್ಲಿ ಒಬ್ಬರು ಹಳಕಟ್ಟಿ ಅವರು.

ಹಳಕಟ್ಟಿ ಅವರು ಕೇವಲ ಶಾಲಾ ಸಂಸ್ಥೆಗಳ ಸಂಘಟಕರು, ಸ್ಥಾಪಕರು ಅಷ್ಟೇ ಆಗಿರಲಿಲ್ಲ. ಒಳ್ಳೆಯ ಶಿಕ್ಷಣವೇತ್ತರೂ ಆಗಿದ್ದರು. ಮುಂಬಯಿ ವಿಶ್ವವಿದ್ಯಾಲಯದ ಅಭ್ಯಾಸ ಮಂಡಲಿಯ ಸದಸ್ಯರಾಗಿ ಪರೀಕ್ಷಕರಾಗಿ ಸೆನೆಟ್ ಸದಸ್ಯರಾಗಿ, ಪಠ್ಯಪುಸ್ತಕ ಸಂಪಾದಕರಾಗಿ, ಪರೀಕ್ಷೆಗಳ ಮೇಲ್ವಿಚಾರಕರಾಗಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಶಿವಶರಣರ ವಚನ ವಾಙ್ಮಯವನ್ನು ಗ್ರಾಮಾಂತರ ಗಳಲ್ಲಿ ವಾಸಿಸುವ ಹಿಂದುಳಿದ ಜನರಿಗೋಸ್ಕರ ತಿಳಿಸಲು ಗ್ರಾಮಗಳಲ್ಲಿ ಶಿವಾನುಭವ ಸಂಘಗಳನ್ನು ಸ್ಥಾಪಿಸಲು ತಮ್ಮ ಪತ್ರಿಕೆಗಳಾದ ಶಿವಾನುಭವ ಮತ್ತು ನವಕರ್ನಾಟಕದ ಮೂಲಕ ಪ್ರಯತ್ನಿಸಿದರು. ಫಲಿತವಾಗಿ ಕರ್ನಾಟಕದಲ್ಲಿ ಸುಮಾರು ೧೫೦ ಗ್ರಾಮದವರು ಕಾರ್ಯನಿರತರಾದರು. ಇಂಥ ಸಂಘಗಳ ಉಪಯೋಗಕ್ಕಾಗಿ ಪಠ್ಯಪುಸ್ತಕಗಳನ್ನು ನಿರ್ಮಿಸುವುದು ಅವಶ್ಯವೆಂದು ತಿಳಿದು, ಅದಕ್ಕಾಗಿ ಪರಮಾತ್ಮನ ವಚನಗಳು, ಭಕ್ತಿಯ ವಚನಗಳ ಹೊಸ ಪದ್ಧತಿಯ ಬಸವೇಶ್ವರರ ವಚನಗಳು, ದೇವರ ದಾಸಿಮಯ್ಯನ ವಚನಗಳು ಈ ಗ್ರಂಥಗಳನ್ನು ಪ್ರಕಟಿಸಿದರು.

ಈ ವಚನಗಳ ಪ್ರಸಾರಕ್ಕೆ ಅನಕ್ಷರಸ್ಥರಿಗೂ ತಲುಪಲು ಶಿವಾನುಭವ ಸಂಘಗಳ ಸಭೆಗಳಲ್ಲಿ ಗಾಯನದ ಮೂಲಕ ಹಾಡಲು ನೆರವಾಗುವಂತೆ 'ವಚನ ಗಾಯನ'ವೆಂಬ ಪುಸ್ತಕವನ್ನು ಪ್ರಕಟ ಪಡಿಸಿದರು. ವಚನ ವಾಙ್ಮಯದ ವೈವಿಧ್ಯ ತಿಳಿಸುವ, ಬಸವೇಶ್ವರ ತತ್ತ್ವಗಳು ಶಿವಾನುಭವ ಸತ್ಯಮಾರ್ಗ ಎಂಬ ಎರಡು ಗದ್ಯಗ್ರಂಥ ಗಳನ್ನು ಪ್ರಕಾಶಿಸಿದರು.

ಗ್ರಾಮೀಣ ಜನರಿಗೆ ವ್ಯವಸಾಯಕ್ಕೆ ಉಪಯುಕ್ತವಾದ ಮಹತ್ವದ ವಿಷಯಗಳಿದ್ದ ಕೃಷಿಜ್ಞಾನ ಪ್ರದೀಪಿಕೆ (ರಚನೆ: ಘನಮಠದಾರ್ಯರು)ಯನ್ನು ಪ್ರಕಟಿಸಿದ್ದಾರೆ. ಕನ್ನಡಕ್ಕೆ ದುಡಿದವರ ಪರಿಚಯ ಗ್ರಾಮೀಣ ಜನತೆಗೆ ಆಗಬೇಕು ಎಂದು ಚನ್ನಬಸಪ್ಪ ಧಾರವಾಡ ಎಜುಕೇಷನ್ ಇನ್ಸ್‌ಪೆಕ್ಟರ್ ಇವರ ಚರಿತ್ರೆಯನ್ನು ಪ್ರಕಟಿಸಿದರು. ಡೆಪ್ಯುಟಿ ಚನ್ನಬಸಪ್ಪ ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು ಬದುಕಿಸಿದವರು. ಇವರ ವಿಚಾರ ಎಲ್ಲರೂ ತಿಳಿದಿರಬೇಕು ಎಂಬ ಇವರ ಆಶಯ ಮೆಚ್ಚುವಂಥದ್ದು.

ಶಿಕ್ಷಣದ ಬಗ್ಗೆ ಚಿಂತನ-ಮಂಥನ ಮಾಡಿ ಅವುಗಳನ್ನು ತಮ್ಮ ದಿನಚರಿ ಟಿಪ್ಪಣಿಯಲ್ಲಿ ಗುರುತಿಟ್ಟುಕೊಳ್ಳುತ್ತಿದ್ದರು. ಈ ದಿನಚರಿಯ ಟಿಪ್ಪಣಿಯಲ್ಲಿರುವ ಶೈಕ್ಷಣಿಕ ವಿಚಾರಗಳು ಇಂದಿಗೂ ಆದರ್ಶದ ಸೂತ್ರಗಳಾಗಿವೆ. ಕೆಲವು ವಿಚಾರಗಳು ಹೀಗಿವೆ:

೧) ಶಿಕ್ಷಣ ಕೇವಲ ಕಾರಕೂನರನ್ನು ತಯಾರಿಸುವ ಕಾರ್ಖಾನೆ ಯಾಗಕೂಡದು.

೨) ವ್ಯಕ್ತಿಯಲ್ಲಿ ಪ್ರಜ್ಞೆ ಆಲೋಚನಾಸಕ್ತಿ ಮತ್ತು ಸ್ವಾವಲಂಬನೆ ಸ್ವಾಭಿಮಾನಗನ್ನು ಜಾಗೃತಗೊಳಿಸುವುದು ಶಿಕ್ಷಣದ ಗುರಿಯಾಗ ಬೇಕು.

೩) ಸಚ್ಚಾರಿತ್ರ್ಯವನ್ನು ರೂಪಿಸುವುದೇ ವಿದ್ಯೆ.

೪) ವಿದ್ಯಾರ್ಥಿಯಲ್ಲಿರುವ ಶಕ್ತಿಯ ಸಂಪೂರ್ಣತೆಯ ಸಾಕ್ಷಾತ್ಕಾರವಾಗುವುದೇ ಶಿಕ್ಷಣದ ಗುರಿ.

೫) ಹುಟ್ಟಿದ ನೆಲದ ಮಣ್ಣಿಗೆ, ನೀರು ಹಾಗೂ ಬೆಳಕುಗಳೊಡನೆ ಬೆರೆಯದ ಶಿಕ್ಷಣ ನಿಸ್ಸಾರ ನಿರರ್ಥಕ.

ಕನ್ನಡ ನಾಡಿನ ಶ್ರೇಷ್ಠ ಶಿಕ್ಷಣವೇತ್ತರಾದ ಹಳಕಟ್ಟಿ ಅವರು ವಿಜಾಪುರದಲ್ಲಿ ಶಿಕ್ಷಣ ಪ್ರಸಾರಕ್ಕೆ ಶ್ರಮಿಸದಿದ್ದರೆ ಡಾ. ಬ.ವೀ. ಹಂಪನಗೌಡರು ಹೇಳಿದ ಹಾಗೆ "ವಿಜಾಪುರವು ಕನ್ನಡ ಜಿಲ್ಲೆಯಾಗಿ ಉಳಿಯುತ್ತಿರಲಿಲ್ಲ. ಮರಾಠಿಗರ ಕೈಸೇರಿ ದಕ್ಷಿಣ ಮಹಾರಾಷ್ಟ್ರವಾಗಿ ಬಿಡುತ್ತಿತ್ತು."

ಹಳಕಟ್ಟಿ ಅವರು ಕಟ್ಟಿ ಬೆಳಗಿಸಿದ ಸಂಘಸಂಸ್ಥೆಗಳು ಅನೇಕ. ಮಾಧ್ಯಮ ವರ್ಗದವರ ಹಿತಾಸಕ್ತಿಯನ್ನು ಅವರು ಎಂದೂ ಮರೆತಿರಲಿಲ್ಲ. ಬೇಸಾಯಗಾರರ ಮತ್ತು ಬಡಜನರ ಉದ್ಧಾರಕ್ಕಾಗಿ ಅವರು ಕೈಗೊಂಡ ಕ್ರಮಗಳು ಹಲವಾರು. ಆ ಪೈಕಿ ವಿಜಾಪುರ ಶ್ರೀ ಸಿದ್ಧೇಶ್ವರ ಸಹಕಾರಿ ಸಂಘದ ಸ್ಥಾಪನೆಯೂ ಒಂದು. ೧೯೧೨ರಲ್ಲಿ ಸ್ಥಾಪಿತವಾದ ಈ ಸಂಘಕ್ಕೆ ೧೯೧೨ ರಿಂದ ೧೯೨೧ ರವರೆಗೆ ಹಳಕಟ್ಟಿ ಅವರೇ ಅಧ್ಯಕ್ಷರಾಗಿ ಸಂಘ ೩೦೫೦

ರೂ. ಬಂಡವಾಳದಿಂದ ೨೪ ಲಕ್ಷ ರೂ. ಬಂಡವಾಳ ಹೊಂದುವ ಹಾಗೆ ಪ್ರಗತಿ ಪಥದಲ್ಲಿ ಕೊಂಡೊಯ್ದರು. ಇಂದು ಆ ಬ್ಯಾಂಕು ಹತ್ತಾರು ಶಾಖೆಗಳನ್ನು ಹೊಂದಿದೆ. ಹಾಗೆಯೇ ರೈತರ ಕ್ಷೇಮಾಭಿವೃದ್ಧಿಗಾಗಿಯೇ ಒಕ್ಕಲು ಸಹಕಾರಿ ಸಂಘವನ್ನು ಸ್ಥಾಪಿಸಿದ್ದು ೧೯೨೫ರಲ್ಲಿ 'ದಿ ವಿಲ್ಸನ್ ಆ್ಯಂಟಿ ಫ್ಯಾಮಿನ್ ಇನ್‌ಸ್ಟಿಟ್ಯೂಟ್' (ಬರಗಾಲ ನಿವಾರಣಾ ಸಂಸ್ಥೆ)ಯನ್ನು ಸ್ಥಾಪಿಸಿದರು.

ಜನಮನ್ನಣೆ-೧

ಫ.ಗು. ಹಳಕಟ್ಟಿ ಅವರ ಅಪೂರ್ವ ಹಾಗೂ ಅಪಾರ ಜನಸೇವೆಗೆ ನಾಡಿನ ಜನತೆ ನಾನಾ ರೀತಿಯಲ್ಲಿ ಸನ್ಮಾನ-ಗೌರವಗಳ ಮೂಲಕ ಕೃತಜ್ಞತೆ ಅರ್ಪಿಸಿದೆ. ಅವುಗಳಲ್ಲಿ ಕೆಲವನ್ನು ತಿಳಿಸಿದೆ:

ಬ್ರಿಟಿಷ್ ಸರಕಾರವು ಹಳಕಟ್ಟಿ ಅವರು ಸಾರ್ವಜನಿಕ ರಂಗದಲ್ಲಿ ಮಾಡಿದ ಶಿಕ್ಷಣ ಪ್ರಸಾರ ಪತ್ರಿಕಾ ಸೇವೆ, ಸಂಶೋಧನೆಗಳನ್ನು ಗಮನಿಸಿ ರಾವಸಾಹೇಬ, ರಾವಬಹಾದ್ದೂರ್ ಎಂಬ ಪ್ರಶಸ್ತಿಗಳನ್ನು ನೀಡಿದೆ.

೧೯೫೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಫ.ಗು. ಹಳಕಟ್ಟಿ ಅವರು ಕರ್ನಾಟಕಕ್ಕೆ ಕನ್ನಡಕ್ಕೆ ಕನ್ನಡಿಗರಿಗೆ ಸಲ್ಲಿಸಿದ ಸೇವೆಯನ್ನು ವಿಶೇಷವಾಗಿ ಶಿಕ್ಷಣ ರಂಗದಲ್ಲಿ ಸಲ್ಲಿಸಿದ ಸೇವೆಯನ್ನು ಗಮನಿಸಿ ಕೃತಜ್ಞತೆಯ ಕುರುಹಾಗಿ ಡಾಕ್ಟರ್ ಆಫ್ ಲಿಟರೇಚರ್ ಎಂಬ ಗೌರವ ಡಾಕ್ಟರೇಟನ್ನು ದಯಪಾಲಿಸಿತು. ಸೇವೆಯಲ್ಲಿ ಹಳಕಟ್ಟಿ ಅವರೇ ಒಂದು ಸಚೇತನ ವಿಶ್ವವಿದ್ಯಾಲಯವಾಗಿದ್ದರು.

ಅನೇಕ ಸಮ್ಮೇಳನಗಳ ಅಧ್ಯಕ್ಷ ಸ್ಥಾನದ ಗೌರವ ಹಳಕಟ್ಟಿ ಅವರಿಗೆ ಪ್ರಾಪ್ತವಾಗಿದೆ. ೧೯೨೧ರ ವೀರಶೈವ ತರುಣ ಸಮ್ಮೇಳನದ ಅಧ್ಯಕ್ಷತೆ (೧೯೨೬), ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ, ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷತೆ -ಇವೇ ಮುಂತಾದ ಅಧ್ಯಕ್ಷ ಸ್ಥಾನದ ಗೌರವಗಳು ಹಳಕಟ್ಟಿ ಅವರು ವೀರಶೈವ ಸಾಹಿತ್ಯ ಸಂಸ್ಕೃತಿಗೆ ಸಲ್ಲಿಸಿದ ಸೇವೆಗೆ ದ್ಯೋತಕವಾಗಿವೆ.

ರಾಣೆಬೆನ್ನೂರಿನ ಮಹಾಜನರು ೧೯೪೪ರಲ್ಲಿ ಪೌರ ಸನ್ಮಾನ ನೀಡಿದರು. ೨೯.೧೦.೧೯೫೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ ಮಾನಪತ್ರ ನೀಡಿ ಗೌರವಿಸಿತು. ಪರಿಷತ್ತು ತನ್ನ ಮಾನಪತ್ರದಲ್ಲಿ ಹಳಕಟ್ಟಿ ಅವರನ್ನು "ಶರಣ ಸಾಹಿತ್ಯ ಪ್ರಚಾರಕ್ಕಾಗಿ, ಅವಿಶ್ರಾಂತವಾಗಿ ದುಡಿಯುತ್ತಿರುವ ಕನ್ನಡನಾಡಿನ ಸತ್ಪುರುಷರೂ ಶಿವಾನುಭವಿಗಳು" ಎಂದು ಹೊಗಳಿದೆ.

ಬೆಂಗಳೂರಿನ ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠದಲ್ಲಿ ವಿದ್ಯಾರ್ಥಿ ಸಂಘದಲ್ಲಿ ಗೌರವಿಸಿ ಮಾನಪತ್ರ ನೀಡಲಾಯಿತು.

ಜನಮನ್ನಣೆ-೨

೧೯೫೧ರಲ್ಲಿ ನವಲಗುಂದದಲ್ಲಿ, ೧೯೫೪ರಲ್ಲಿ ಸಿಂದಗಿಯಲ್ಲಿ, ೧೯೫೬ರಲ್ಲಿ ಬೆಳಗಾಂವಿಯಲ್ಲಿ, ೧೯೫೭ರಲ್ಲಿ ಧಾರವಾಡದಲ್ಲಿ -ಹೀಗೆ ನಾಡಿನ ನಾನಾ ಕಡೆ ಜನರು ಹಳಕಟ್ಟಿ

ಅವರನ್ನು ಕರೆದು ಗೌರವಿಸಿ ಸನ್ಮಾನಿಸಿದ್ದಾರೆ, ಪ್ರಶಸ್ತಿ ನೀಡಿದ್ದಾರೆ, ಮಾನಪತ್ರ ಅರ್ಪಿಸಿದ್ದಾರೆ.

ಕೇವಲ ಮಾನಪತ್ರಗಳನ್ನು ನೀಡಿ ಹಣ್ಣುಹಂಪಲು ಹಾರ ಶಾಲುಗಳಿಂದಷ್ಟೇ ಗೌರವಿಸದೆ ಹಮ್ಮಿಣೆಗಳನ್ನು (ಹಣವನ್ನು) ಅರ್ಪಿಸಿದ್ದಾರೆ. ಒಂದಲ್ಲ ಎರಡಲ್ಲ ಹಲವಾರು ಕಡೆಗಳಲ್ಲಿ. ಉದಾಹರಣೆಗೆ ೧೯೫೭ರಲ್ಲಿ ವಿಜಾಪುರದ ಶ್ರೀ ಸಿದ್ಧೇಶ್ವರ ನಗರ ಸಹಕಾರಿ ಬ್ಯಾಂಕು ೫೮೦೦ ರೂ. ಹಮ್ಮಿಣೆಯನ್ನು.

ಹುಬ್ಬಳ್ಳಿ ವೀರಭಿಕ್ಷಾವೃತ್ತಿ ಮಠದ ಶ್ರೀ ಮ.ನಿ.ಪ್ರ.ಗಳಾದ ಶ್ರೀ ಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ಬನಹಟ್ಟಿ ಗ್ರಾಮದ ನಾಗರಿಕರ ಸನ್ಮಾನ ಸಮಾರಂಭದಲ್ಲಿ (೧೯೫೮) ನಿಧಿ ಸಮೇತ ಸನ್ಮಾನ ಮಾಡಿದರು.

೧೯೬೦ರಲ್ಲಿ ಧಾರವಾಡದಲ್ಲಿ ಹಮ್ಮಿಣೆ ಆಫೀಸಿನ ಸಭೆಯಲ್ಲಿ ಧಾರವಾಡಕರರು "ಸಮುದ್ರ ತಳದಲ್ಲಿ ಕುಳಿತ ವೇದಗಳನ್ನು ವಿಷ್ಣುವು ಕೂರ್ಮಾವತಾರ ತಾಳಿ ಮೇಲಕ್ಕೆ ತಂದನು. ಅದೇ ಪ್ರಕಾರ ಡಾ. ಹಳಕಟ್ಟಿ ಅವರು ಮರೆವು ಎಂಬ ಮಹಾಸಾಗರದಲ್ಲಿ ಮುಳುಗಿಹೋದ ವಚನ ಸಾಹಿತ್ಯವನ್ನು ಮೇಲಕ್ಕೆ ಎತ್ತಿದರು" ಎಂದು ಹೊಗಳಿದರು.

ಹೀಗೆ ಹಮ್ಮಿಣೆಗಳನ್ನು ಅರ್ಪಿಸಿ ಮಾನಪತ್ರಗಳನ್ನು ಸಲ್ಲಿಸಿ ಹಳಕಟ್ಟಿ ಅವರನ್ನು ಗೌರವಿಸಿದುದನ್ನು ಕಂಡಾಗ ಅವರ ಸೇವೆಯನ್ನು

ಜನ ಗುರುತಿಸಿದುದಕ್ಕೆ ಸಾಕ್ಷಿಯಾಗಿದೆ. ಅವರ ವರ್ಧಂತ್ಯುತ್ಸವಗಳನ್ನು ಹಲವಾರು ಕಡೆ ಅತಿ ವಿಜೃಂಭಣೆಯಿಂದ ನೆರವೇರಿಸಿದ್ದಾರೆ.

ಹುಬ್ಬಳ್ಳಿ ಸಾದರಹಳ್ಳಿ ಅವರ ಮನೆಯಲ್ಲಿ ಆಚರಿಸಿದ ವರ್ಧಂತಿ ಉತ್ಸವ, ವಿಜಾಪುರದ ಸಿದ್ಧೇಶ್ವರ ಹಾಲಿನಲ್ಲಿ ನಡೆದ ವರ್ಧಂತ್ಯುತ್ಸವ ಬಂಥನಾಳ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದದ್ದು ಇವೇ ಮುಂತಾದ ವರ್ಧಂತಿ ಉತ್ಸವಗಳು ಸ್ಮರಣೀಯ ವಾಗಿವೆ.

ಜನಮನ್ನಣೆ-೩

ಒಬ್ಬ ವ್ಯಕ್ತಿ ನಾಡಿನ ಮಹಾಪುರುಷನಾದಾಗ ಆತ ಬದುಕಿದ್ದಾಗ ಯಾವ ಗೌರವ ಸನ್ಮಾನ ನೀಡಿ ಕೃತಜ್ಞತೆ ಸಲ್ಲಿಸದೆ ಸತ್ತಮೇಲೆ ಸ್ಮಾರಕಗಳನ್ನು ನಿರ್ಮಿಸುವ ನಿದರ್ಶನಗಳು ನಮ್ಮಲ್ಲಿ ಇವೆ. ಅಂತೆಯೇ ಬದುಕಿದಾಗಲೂ ಸತ್ತಾಗಲೂ ಸೇವೆ ಸಲ್ಲಿಸಿದರನ್ನು ಸ್ಮರಿಸದೆ ಇರುವ ಸಂಗತಿಗಳು ಸಾಕಷ್ಟಿವೆ. ಬದುಕಿದ್ದಾಗ ಗೌರವಿಸಿ ಸತ್ತಮೇಲೆ ಮರೆತ ಪ್ರಸಂಗಗಳೂ ಇವೆ. ಇಂದು ನಾಡಿಗಾಗಿ ಏಕೀಕರಣಕ್ಕಾಗಿ ದುಡಿದ ಮಹನೀಯರ ಸ್ಮರಣೆಯೇ ಜನರಿಂದ ಕಣ್ಮರೆಯಾಗಹತ್ತಿದೆ. ಈ ದೃಷ್ಟಿಯಲ್ಲಿ ಫ.ಗು. ಹಳಕಟ್ಟಿ ಅವರು ಪುಣ್ಯವಂತರು, ಅದೃಷ್ಟವಂತರು. ಬದುಕಿದಾಗಲೂ ಜನ ಅವರನ್ನು ಸನ್ಮಾನಿಸಿದರು, ಗೌರವಿಸಿದರು. ಹಮ್ಮಿಣಿ ಅರ್ಪಿಸಿದರು.

ನಿಧನರಾದ ಮೇಲೂ ಜನ ಅವರನ್ನು ಅವರ ಸೇವೆಯನ್ನು ಮರೆಯಲಿಲ್ಲ. ಅನೇಕ ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಹಳಕಟ್ಟಿ

ಅವರ ನೆನಪಿನಲ್ಲಿ ಶಿವಾನುಭವ ಪತ್ರಿಕೆ, ಶರಣ ಚೇತನ ಪತ್ರಿಕೆಗಳು ಪ್ರಕಟವಾಗುತ್ತಿವೆ. ಇದೀಗ ಹಳಕಟ್ಟಿ ಅವರ ಸಮಗ್ರ ಸಾಹಿತ್ಯ ಸಂಪುಟಗಳು ಪ್ರಕಟವಾಗಿವೆ.

ಜನಮನ್ನಣೆ-೪

ಹೀಗೆ ಭವ್ಯ ಬಾಳನ್ನು ಬೆಳಗಿದ ಫ.ಗು. ಹಳಕಟ್ಟಿ ಅವರು ೮೪ನೇ ವಯಸ್ಸಿನಲ್ಲಿ ದಿನಾಂಕ ೨೯.೬.೧೯೬೪ರಲ್ಲಿ ನಿಧನರಾದರು. ಕೊನೆಯವರೆಗೂ ಬಾಡಿಗೆ ಮನೆಯಲ್ಲಿಯೇ ಇದ್ದ ಅವರು ಕೊನೆಯಲ್ಲಿ ಮಾತ್ರ ಬಾಡಿಗೆಯಿಲ್ಲದ ಮನೆಗೆ ಹೋದ 'ಫಕೀರಪ್ಪ'ನವರಾದರು.

೭೭೦ ಅಮರಗಣಂಗಳ ಭವ್ಯ ಸ್ಮಾರಕದ ಮಗ್ಗುಲಿನಲ್ಲಿ ನೆಲೆಗೊಂಡ ಇವರ ಸಮಾಧಿ ಇವರು ೭೭೧ನೇ ಅಮರ ಗಣಾಧೀಶ್ವರರೇ ಎನ್ನಿಸುವಂತಿದೆ.

ಒಬ್ಬ ಮನುಷ್ಯ ಬಡವನಿದ್ದರೂ ನಾಡನ್ನು ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಬಲ್ಲ ಎಲ್ಲ ಕಾಲದಲ್ಲೂ ಜನ ಸ್ಮರಿಸುವಂಥ ಉಪಕಾರಗಳನ್ನು ಮಾಡಬಲ್ಲ ಎಂಬುದಕ್ಕೆ ಫ.ಗು. ಹಳಕಟ್ಟಿ ಅವರು ಮಾದರಿ ಆಗಿದ್ದಾರೆ. ಸ್ಫೂರ್ತಿ ಚೇತನರಾಗಿದ್ದಾರೆ.

ಪುಟ್ಟುವರ್ ಬಹುಜನರ್ ಬಹುಧನವನಾರ್ಜಿಪರ್
ಪುಟ್ಟುವರ್ ಬಹುಜನರ್ ಕೆರೆಕಟ್ಟೆ ಕಟ್ಟುವರ್
ಪುಟ್ಟುವರ್ ಬಹುಜನರ್ ರಾಜ್ಯಮಂ ಕಟ್ಟುವರ್
ಪುಟ್ಟರ್ ಹಳಕಟ್ಟಿಯೊಲಜ್ಞಾನವ ತೊಲಗಿಪರ್

-ಟಿ.ಎಸ್. ಮಲ್ಲಪ್ಪ

ವೀರಶೈವ ಸಾಹಿತ್ಯ ಜೀರ್ಣೋದ್ಧಾರ

ಫ.ಗು. ಹಳಕಟ್ಟಿ ಅವರು ವೀರಶೈವ ಧರ್ಮ ಸಾಹಿತ್ಯ ಸಂವರ್ಧನೆಗಾಗಿ ಶ್ರಮಿಸಿದವರು ನಿಜ. ಇನ್ನು ಅನೇಕರು ಶ್ರಮಿಸಿದ್ದಾರೆ. ಆದಕ್ಕಾಗಿ ತಮ್ಮ ತನುಮನಧನ ಅರ್ಪಿಸಿದ್ದಾರೆ. ಪತ್ರಿಕೆ ಪ್ರಾರಂಭಿಸಿದ್ದಾರೆ, ಪ್ರಕಟನೆ ಹೊರಡಿಸಿದ್ದಾರೆ. ಸಭಾಭವನ ನಿರ್ಮಿಸಿದ್ದಾರೆ. (ಶೆಪರ್ಡ್ ಹಾಲ್, ವಿಜಾಪುರದಲ್ಲಿ) ಸಿದ್ಧರಾಮೇಶ್ವರ ಜಾತ್ರಾಮಹೋತ್ಸವವನ್ನು ಸಾಂಸ್ಕೃತಿಕ ಹಬ್ಬವನ್ನಾಗಿ ರೂಪಿಸಿದ್ದಾರೆ.

ಹಳಕಟ್ಟಿ ಅವರು ವೀರಶೈವ ಸಾಹಿತ್ಯ ಧರ್ಮಗಳ ಪುನರುಜ್ಜೀವನ ಕೈಗೊಂಡ ಕಾಲದಲ್ಲಿ ೨೦ನೇ ಶತಮಾನದ ಆದಿಯಲ್ಲಿ ನಾಡಿನಲ್ಲಿ ವೀರಶೈವರಿಗೆ ಸ್ಥಾನವೇ ಇರಲಿಲ್ಲ. ವೀರಶೈವ ಸಾಹಿತ್ಯ ಧರ್ಮದ ಬಗ್ಗೆ ಇತಿಹಾಸ, ಮಹಾಪುರುಷರ ಬಗ್ಗೆ ಸಾಮಾನ್ಯರ ವಿಚಾರ ಆಕಡೆ ಇರಲಿ, ಮಠಾಧೀಶರಲ್ಲಿ ಪಂಡಿತರಲ್ಲಿ ವಿದ್ಯಾವಂತರಲ್ಲಿ ವಸ್ತುಸ್ಥಿತಿಯ ಅರಿವಿರಲಿಲ್ಲ. ಜನರಲ್ಲಿ ವೀರಶೈವ ಧರ್ಮದ ಬಗ್ಗೆ ಮೂಢನಂಬಿಕೆಗಳು ತಮ್ಮ ಕಲ್ಪನೆಗಳು ಮನೆ ಮಾಡಿದ್ದುವು. ಹಳಕಟ್ಟಿ ಅವರೇ ಹೇಳಿಕೊಂಡಂತೆ ಪರಿಸ್ಥಿತಿ ಹೇಗಿತ್ತು ಎಂದರೆ "ವೀರಶೈವ ಧರ್ಮದ ನಿಜಸ್ಥಿತಿ ಯಾವುದೆಂಬುದನ್ನು ಕಂಡುಹಿಡಿಯುವುದೇ ನನ್ನ ಮುಖ್ಯ ಧ್ಯೇಯವಾಯಿತು" ಎಂದಿದ್ದಾರೆ.

ಇಲ್ಲಿ ಗಮನಿಸಬೇಕಾದ ಮಹತ್ವದ ಸಂಗತಿ ಒಂದಿದೆ. ವೀರಶೈವ ಧರ್ಮ ಸಾಹಿತ್ಯದ ಬಗ್ಗೆ ವಿಶೇಷವಾಗಿ ಪರಿಶ್ರಮಿಸಿ ಇತಿಹಾಸವನ್ನೇ ನಿರ್ಮಿಸಿದ ಹಳಕಟ್ಟಿ ಅವರು ಅಂಥ ಸಂಕುಚಿತ ಸ್ವಭಾವದ ವೀರಶೈವರು ಆಗಿರಲಿಲ್ಲ. ಇದಕ್ಕೆ ಅವರ ಈ ಮಾತುಗಳೇ ಸಾಕ್ಷಿಯಾಗಿವೆ: "ಸಂಸ್ಕೃತಿಯ ನಿಜವಾದ ಸ್ವರೂಪವನ್ನು ತಿಳಿಯಲಿಕ್ಕೆ ಇತರ ಧರ್ಮಗಳ ವ್ಯಾಸಂಗವೂ ಉಪಯುಕ್ತವಾಗಿದೆ."

"...ಎಲ್ಲರೂ ವಿಶಾಲ ಮತ್ತು ಉದಾರಭಾವವನ್ನು ಹೊಂದಿ ಕೆಲಸ ಮಾಡುವುದು ಅವಶ್ಯವು. ಲಿಂಗಾಯತ, ಬ್ರಾಹ್ಮಣ, ಬೌದ್ಧ, ಮುಸಲ್ಮಾನ, ಜೈನ, ದೇವಾಂಗ, ಕುರುಬ, ಹೊಲೆಯ, ಒಕ್ಕಲಿಗ -ಈ ಎಲ್ಲರೂ ಕರ್ನಾಟಕ ಮಕ್ಕಳೆಂದು ತಿಳಿದು ಪರಸ್ಪರ ಬಂಧು ಭಾವವುಳ್ಳವರಾಗಿ ವರ್ತಿಸುವ ಪ್ರಸಂಗ ಬಂದಿದೆ."

"ನಾವು ಕರ್ನಾಟಕತ್ವದ ಭಾವನೆಯಿಂದಲೇ ಕೆಲಸ ಮಾಡಬೇಕಾಗಿದೆ. ವೀರಶೈವ ಸಂಘಟನೆ ಮತ್ತು ಕಾರ್ಯ ಪದ್ಧತಿಯು ಈ ಭಾವನೆಯಿಂದಲೇ ಕೆಲಸ ಮಾಡಬೇಕಾಗಿದೆ." ಫ.ಗು. ಹಳಕಟ್ಟಿ ಅವರು ಧರ್ಮ ಸಮನ್ವಯಕಾರರಾಗಿದ್ದರು. ಸಕಲ ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಆದ್ದರಿಂದ ಅವರಲ್ಲಿ ಈ ಬಗೆಯ ಉದಾರ ಭಾವಗಳು ನೆಲಸಿದ್ದವು. ಅವರ ಜೈನ ವೀರಶೈವ, ಬ್ರಾಹ್ಮಣ ಸಂಸ್ಕೃತಿಗಳು ಎಂಬ ಲೇಖನ ಓದಿದವರಿಗೆ ಈ ಮಾತುಗಳು ಅರ್ಥವಾಗುತ್ತವೆ. ಪ್ರತಿಯೊಬ್ಬನೂ ತನ್ನ ತನ್ನ

ಧರ್ಮಸಾಹಿತ್ಯಕ್ಕೆ ಪರಿಶ್ರಮ ಪಡಬೇಕು. ಆದರೆ ಅದೇ ಕಾಲಕ್ಕೆ ಅನ್ಯಧರ್ಮಗಳ ಹಿರಿಮೆಯನ್ನು ಅವರೊಡನೆ ಸೌಹಾರ್ದ ಭಾವದಿಂದ ಇರುವುದನ್ನು ಮರೆಯಬಾರದು ಎಂಬುದಕ್ಕೆ ಫ.ಗು. ಹಳಕಟ್ಟಿ ಅವರು ಜ್ವಲಂತ ನಿದರ್ಶನವಾಗಿದ್ದಾರೆ.

ಪತ್ರಿಕಾ ಸಾಹಿತ್ಯದ ಮೂಲಕವೂ ವೀರಶೈವ ಸಾಹಿತ್ಯ ಪ್ರಕಾಶನಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಶಿವಾನುಭವ ಪತ್ರಿಕೆ ಅದಕ್ಕೆ ನಿದರ್ಶನವಾಗಿದೆ. ಅದನ್ನು ಈ ಹಿಂದೆ ಪ್ರಸ್ತಾಪಿಸಿದೆ.

ವೀರಶೈವೇತರ ಸಾಹಿತ್ಯ ಸಂಸ್ಕೃತಿ ಕೊಡುಗೆಯನ್ನು ಎಲ್ಲರೂ ಅರಿತಿರಬೇಕೆಂದು ಧಾರ್ಮಿಕ ಪ್ರಜ್ಞೆಯೊಂದೇ ಸಾಲದೆಂದು ತಿಳಿದ ಹಳಕಟ್ಟಿ ಅವರು ನವಕರ್ನಾಟಕ ಪತ್ರಿಕೆಯನ್ನು ೧೯೨೭ರಲ್ಲಿ ಪ್ರಾರಂಭಿಸಿದರು. ಈ ಪತ್ರಿಕೆಯಲ್ಲಿ ಸುತ್ತಮುತ್ತಲಿನ ಗ್ರಾಮಾಂತರ ಸುದ್ದಿಗಳಿಂದ ಹಿಡಿದು ಅಂತರರಾಷ್ಟ್ರೀಯ ವಿದ್ಯಮಾನಗಳವರೆಗೆ ಎಲ್ಲ ಬಗೆಯ ವಿಷಯಗಳನ್ನು ರಾಜಕೀಯ, ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ, ಔದ್ಯೋಗಿಕ ವಿಷಯಗಳನ್ನು ಸುದ್ದಿಗಳನ್ನು ಪ್ರಶಂಸಿಸಿದರು. ಜನಜಾಗೃತಿ ಜನಸೇವೆ ಕರ್ನಾಟಕದ ಏಳಿಗೆಯನ್ನು ಮೂಲೋದ್ದೇಶ ಹೊಂದಿದ ಈ ಪತ್ರಿಕೆ ೧೯೫೧ರವರೆಗೆ ೨೫ ವರುಷಗಳ ಕಾಲ ವಾರಪತ್ರಿಕೆಯಾಗಿ ನಡೆದು ಬಂದು ಅಮೂಲ್ಯ ಕೊಡುಗೆಯನ್ನು ಸಲ್ಲಿಸಿದೆ. ಫ.ಗು. ಹಳಕಟ್ಟಿ ಅವರು ಶ್ರೇಷ್ಠಮಟ್ಟದ ಪತ್ರಿಕಾ ಸಂಪಾದಕರು ಎಂಬುದಕ್ಕೆ ಶಿವಾನುಭವ ನವಕರ್ನಾಟಕ ಪತ್ರಿಕೆಗಳು ಸಾಕ್ಷಿ ಆಗಿವೆ.

ಹಳಕಟ್ಟಿ ಅವರ ಸಾಹಿತ್ಯ ಕೊಡುಗೆ

ಬಾಳಿನುದ್ದಕ್ಕೂ ಸಾಹಿತ್ಯ ಸೇವೆಯನ್ನೇ ಮಾಡಿಕೊಂಡು ಬಂದವರು ಹಳಕಟ್ಟಿ ಅವರು. "ನಾನು ಕೇಳಿದ ಮಹತ್ವದ ವ್ಯಾಖ್ಯಾನಗಳು ಕಾಲೇಜಿನ ಪ್ರೊಫೆಸರ್ ಕಾಲೇಜಿನಲ್ಲಿ ಹೇಳಿದ ವಿಷಯಗಳು ನಾನು ಓದಿದ ಗ್ರಂಥಗಳು ಅಥವಾ ಪಠ್ಯಪುಸ್ತಕಗಳು ಇವುಗಳ ಟಿಪ್ಪಣಿಗಳನ್ನು ಅಥವಾ ಸಾರಾಂಶವನ್ನು ಬರೆದಿಡುವುದು ನನ್ನ ವಾಡಿಕೆಯಾಗಿದೆ. ಹೈಸ್ಕೂಲ್ ವಿದ್ಯಾರ್ಥಿ ಆದಾಗಿನಿಂದಲೂ ಹೀಗೆ ಬರೆದಿಡುವುದು ನನ್ನ ಪದ್ಧತಿ ಆಗಿತ್ತು" ಎಂದಿದ್ದಾರೆ. ಈ ಹವ್ಯಾಸದ ಜೊತೆಗೆ ತಾಳೆಗರಿಗಳ ಸಂಗ್ರಹ ಅವರ ಇನ್ನೊಂದು ಹವ್ಯಾಸವಾಗಿತ್ತು. ೧೯೨೦ರ ವೇಳೆಗೆ ಓಲೆಗರಿಳಿಂದ ಸಂಗ್ರಹಿಸಿಟ್ಟು ಕೊಂಡ ಗ್ರಂಥಗಳ ಸಂಖ್ಯೆ ೧೦೦೦ ದಾಟಿತ್ತು. ಕೇವಲ ಗಂಥ ಸಂಗ್ರಹ ಮಾಡುತ್ತಿರಲಿಲ್ಲ. ಅವರೊಬ್ಬ ವಿದ್ವಾಂಸರೂ ಗ್ರಂಥ ಭಂಡಾರಿಗಳೂ ಆಗಿದ್ದರು. ಎಲ್ಲ ಗ್ರಂಥಗಳನ್ನು ವಿಷಯಾನುಸಾರ ವರ್ಗೀಕರಣ ಮಾಡಿ ಪಟ್ಟಿ ಮಾಡಿಟ್ಟುಕೊಂಡಿದ್ದಾರೆ. ಒಂದು ಸಂಸ್ಥೆ ಮಾಡುವ ಕೆಲಸ ಅವರೊಬ್ಬರೇ ಮಾಡಿದ್ದರು.

ಹೀಗೆ ಸಂಗ್ರಹಿಸಿದ ತಾಳೆಗರಿಗಳ ವಚನಶಾಸ್ತ್ರ ಸಾಹಿತ್ಯವನ್ನು ಪ್ರಕಟಿಸಲು ನಿರ್ಧರಿಸಿದಾಗ ಅವುಗಳನ್ನು ಅಚ್ಚಿಗಾಗಿ ನಕಲು ಮಾಡಲು ಇಬ್ಬರು ಕಾರಕೂನರನ್ನು ನೇಮಿಸಿದರು. ಸತತವಾಗಿ ಎರಡು ವರ್ಷಗಳ ಕಾಲ ಕಾರ್ಯ ಮಾಡಿದಾಗ, ಅದರಿಂದ ಆ ಕಾಲದಲ್ಲಿ ಕೇವಲ ೫೦ ವಚನಕಾರರ ಹೆಸರು ಗೊತ್ತಿದ್ದವು. ಆದರೆ ಅವರು ಸಂಗ್ರಹಿಸಿದ ಕೃತಿಗಳಿಂದ ವಚನಕಾರರು ೨೫೦

ಇರಬಹುದೆಂದು ತಿಳಿಯಿತು. ಪ್ರತಿ ವಚನಕಾರರ ವಚನಗಳನ್ನು ಪ್ರತಿ ಓಲೆಯಿಂದಲೂ ಪ್ರತ್ಯೇಕಿಸಿ ನಕಲು ಮಾಡಿಸಿದರು. ಅದನ್ನು ಅಚ್ಚುಮಾಡಿ ಜನರ ಮುಂದಿಟ್ಟು ಅವರು ವಕೀಲರಾಗಿದ್ದ ಅವಧಿಯಲ್ಲೆ ಈ ಕೃತಿಗಳನ್ನು ಪ್ರಕಟಿಸಿದರು. ನಾಡಿನಲ್ಲಿ ಎಲ್ಲ ಜನರ ಅಭ್ಯಾಸಕ್ಕೆ ಪಂಡಿತರ ಸಂಶೋಧನೆಗೆ ಆಕರ ಸಾಮಗ್ರಿ ಆಯಿತು. ಇವರ ಪ್ರಕಟನೆಗಳು ಎಷ್ಟು ಎಂಬುದು ಖಚಿತವಿಲ್ಲ. ಏಕೆಂದರೆ ಅಪ್ರಕಟಿತವಾದವು ಕೆಲವಿವೆ.

ಹಳಕಟ್ಟಿ ಅವರಿಂದ ಪ್ರಕಟಿತವಾದ ಅಪಾರ ಸಾಹಿತ್ಯ ರಾಶಿಯಲ್ಲಿ ಚರಿತ್ರೆ, ನಿಘಂಟು, ಸಂಪಾದಿತ ಗ್ರಂಥಗಳು, ಸ್ವತಂತ್ರ ಗ್ರಂಥಗಳು, ಪತ್ರಿಕಾ ಲೇಖನಗಳು, ಅಪ್ರಕಟಿತ ಸಾಹಿತ್ಯ ಇವೆ. ಅವರು ಪ್ರಕಟಿಸಿದ ಗ್ರಂಥಗಳ ಸಂಖ್ಯೆ ಖಚಿತವಿಲ್ಲ. ಒಬ್ಬೊಬ್ಬರು ಒಂದೊಂದು ಸಂಖ್ಯೆ ಹೇಳಿದ್ದಾರೆ. ೧೬೫ ಗ್ರಂಥಗಳೆಂದು ಹಳಕಟ್ಟಿ ಅವರೇ ಒಂದೆಡೆ ಹೇಳಿದ್ದರೂ ಎಲ್ಲವೂ ದೊರೆತಿಲ್ಲ. ಅದೇನೇ ಇರಲಿ ಈಗ ದೊರೆತಿರುವಷ್ಟೇ ಸಾಹಿತ್ಯ ಅಪೂರ್ವವಾಗಿದೆ, ಅಪಾರವಾಗಿದೆ.

ಹಳಕಟ್ಟಿ ಅವರಿಗೆ ಪ್ರಿಯವಾದ ಸಾಹಿತ್ಯ ಪ್ರಕಾರಗಳಲ್ಲಿ ಜೀವನ ಚರಿತ್ರೆಗಳು ಒಂದಾಗಿದೆ. ಶಿವಶರಣರ ಚರಿತ್ರೆಗಳು ಶಿವಶರಣೆಯರ ಚರಿತ್ರೆಗಳು, ೭೭೦ ಅಮರಗಣಾಧೀಶ್ವರರ ಚರಿತ್ರೆಗಳು, ಕೈ.ವಾ. ಚನ್ನಬಸಪ್ಪ ಬಸವಲಿಂಗಪ್ಪ ಧಾರವಾಡ ಇವರ ಚರಿತ್ರೆ ಇವು ಮುಖ್ಯ ಕೃತಿಗಳಾಗಿವೆ.

ವೀರಶೈವ ರಾಜಮನೆತನಗಳ ಚರಿತ್ರೆಗಳು ಬಸವೇಶ್ವರ ಚರಿತ್ರೆ ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಕೃತಿಗಳಾಗಿರೆ. ಸಾರಂಗ ಮಠಾಧೀಶ್ವರರು ಚರಿತ್ರ ಗ್ರಂಥ ಕ್ಷೇತ್ರಕಾರ್ಯ ಮಾಡಿ ಬರೆದ ಗ್ರಂಥ. ಗದ್ಯದಲ್ಲಿ ಜೀವನ ಚರಿತ್ರೆಗಳನ್ನು ಬರೆದು ವೀರಶೈ ಮಹಾಪುರುಷರ ಬಗ್ಗೆ ಜಾಗೃತಿ ಉಂಟುಮಾಡಿದ್ದು ಹಳಕಟ್ಟಿ ಅವರ ವಿಶೇಷ. ಇವರ ಮಾದರಿಯಲ್ಲಿ ಗದುಗಿನ ತೋಂಟದಾರ್ಯ ಮಠದವರು ಪ್ರಕಟಿಸಿರುವ ನೂರಾರು ವೀರಶೈವ ಪುಣ್ಯಪುರುಷರ ಮಾಲಿಕೆಗೆ ಹಳಕಟ್ಟಿ ಅವರ ಕಾರ್ಯ ಪ್ರೇರಣೆ ನೀಡಿದೆ ಎಂದರೆ ತಪ್ಪಾಗಲಾರದು. ಸುಬೋಧ ರಾಮರಾಯರು ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯಲ್ಲಿ ೨೦೦ಕ್ಕೂ ಹೆಚ್ಚಿನ ಮಹಾಪುರುಷರ ಪರಿಚಯ ನೀಡಿದ್ದಾರೆ. ಭಾರತ ಭಾರತಿ ಸಂಸದ ಅ.ನ.ಕೃ. ಅವರಿಂದ ಸಂಪಾದಿತ ಐ.ಬಿ.ಎಚ್ ಪ್ರಕಾಶನದ ಕವಿ ಕಾವ್ಯ ಪರಿಧಿಯ ಮೇಲೆ ಇದೀಗ ಬಸವತತ್ತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ ಪ್ರಕಾಶನ ಪ್ರಕಟಿಸುತ್ತಿರುವ ಶರಣರ ಜೀವನ ಚಿತ್ರಮಾಲೆ ಗಮನಾರ್ಹ ಕೃತಿಗಳಾಗಿವೆ. ಈ ರೀತಿ ಶರಣರ ಜೀವನ ಚರಿತ್ರೆ ಪ್ರಕಟನೆಗೆ ಹಳಕಟ್ಟಿ ಅವರು ಮೊದಲಿಗೆ ದಾರಿ ತೋರಿದರು ಎನ್ನಬಹುದು.

ಹಳಕಟ್ಟಿ ಅವರು ವಿದ್ವಾಂಸರು ಎನ್ನುವುದಕ್ಕೆ ಅವರು ೧೯೪೩ರಲ್ಲಿ ಪ್ರಕಟಿಸಿದ 'ಶಿವಾನುಭವ ಶಬ್ದಕೋಶ'ವೇ ಸಾಕ್ಷಿ ಈಚೆಗೆ ಹಲವು ವೀರಶೈವ ಶಬ್ದಕೋಶಗಳು ಪ್ರಕಟವಾಗಿದ್ದರೂ

ಅವುಗಳಿಗೆ ಮೇಲ್ಪಂಕ್ತಿ ಹಳಕಟ್ಟಿ ಅವರ ನಿಘಂಟು ಎನ್ನಬಹುದು.

ಶಿವಾನುಭವ ಶಬ್ದಕೋಶ ಕನ್ನಡಕ್ಕೆ ಉತ್ತಮ ಕೊಡುಗೆ. ಇದನ್ನು ರಚಿಸುವ ಉದ್ದೇಶವನ್ನು ಅವರೇ ತಿಳಿಸಿದ್ದಾರೆ. "ವಚನಗಳ ಅರ್ಥವು ನಮಗೆ ತಿಳಿಯುವುದಿಲ್ಲವೆಂಬ ಆಕ್ಷೇಪಗಳು ಯಾವಾಗಲೂ ಮಾಡಲ್ಪಡುತ್ತಿರುವುದರಿಂದ ಇಂಥವರಿಗೆ ಉಪಯೋಗವಾಗ ಲೆಂದು ನಾವು ಈ ಗ್ರಂಥವನ್ನು ಸಿದ್ಧಗೊಳಿಸಿದ್ದೇವೆ." ೮೫೫ ವೀರಶೈವ ಶಬ್ದಗಳನ್ನು ೧೮ ಭಾಗಗಳಲ್ಲಿ ವಿಷಯಾನುಸಾರ ವರ್ಗೀಕರಿಸಿ ಕೊಟ್ಟಿದ್ದಾರೆ. ಕೊನೆಯಲ್ಲಿ ೧೬ ಪುಟಗಳಲ್ಲಿ ಎಲ್ಲ ಶಬ್ದಗಳ ಶಬ್ದಾನುಕ್ರಮಣಿಕೆಯನ್ನು ಕೊಟ್ಟಿರುವರು. ಇದರಿಂದ ಶಬ್ದಗಳನ್ನು ಹುಡುಕಿಕೊಳ್ಳಲು ಸುಲಭವಾಗಿದೆ. ಕನ್ನಡ ನಿಘಂಟುಗಳು ಇಂದು ನೂರಾರು ಬಗೆಗಳಲ್ಲಿ ಬಂದಿವೆ. ಆದಾಗ್ಯೂ ಹಳಕಟ್ಟಿ ಅವರ ಶಬ್ದಕೋಶಕ್ಕೆ ವಿಶಿಷ್ಟ ಸ್ಥಾನವಿದೆ. ಇಂದಿಗೂ ಉದಾತ್ತ ಗ್ರಂಥವಾಗಿದೆ. ಮರುಮುದ್ರಣದ ಮುಖಪುಟದ ಮಾತು ಸೂಕ್ತವಾಗಿದೆ. "ವಚನ ಪಿತಾಮಹರು ಶಿವಾನುಭವ ಸಾಹಿತ್ಯಾಭ್ಯಾಸಿಗಳಿಗೆ ಒಪ್ಪಿಸಿಕೊಟ್ಟು ಹೋದ ಅಪ್ರತಿಮ ಏಕೈಕ ಅಮೂಲ್ಯ ನಿಧಿ."

ಕನ್ನಡ ಗ್ರಂಥ ಸಂಪಾದನ ಇತಿಹಾಸದಲ್ಲಿ ವಿದೇಶಿ ವಿದ್ವಾಂಸರ ಕೊಡುಗೆ ೧೯ನೇ ಶತಮಾನದ ಉತ್ತರಾರ್ಧ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಕಾಣುತ್ತೇವೆ. ೨೦ನೇ ಶತಮಾನದ ಆದಿಯಲ್ಲಿ ಹಾಗೂ ೧೯ನೇ ಶತಮಾನದ ಅಂತ್ಯದಲ್ಲಿ ಅನಂತರವೂ ದೇಶೀಯ

ವಿದ್ವಾಂಸರ ಅಪಾರ ಕೊಡುಗೆ ಕಾಣುತ್ತೇವೆ. ಈ ಪೈಕಿ ಉತ್ತರ ಕರ್ನಾಟಕದಲ್ಲಿ ದೇಶೀಯ ವಿದ್ವಾಂಸರು ನೀಡಿದ ಕನ್ನಡ ಗ್ರಂಥ ಸಂಪಾದನ ಕ್ಷೇತ್ರದ ಕೊಡುಗೆಯಲ್ಲಿ ಹಳಕಟ್ಟಿಯವರ ಕೊಡುಗೆ ಅಗ್ರಗಣ್ಯವಾದುದು.

ಡಾ. ಫ.ಗು. ಹಳಕಟ್ಟಿ ಅವರ ಸಮಗ್ರ ಸಾಹಿತ್ಯವನ್ನು ಅವರ ಬಗ್ಗೆ ಮಹಾಪ್ರಬಂಧ ರಚಿಸಿದ ಡಾ. ಬಿ.ಎಂ. ಪಾಟೀಲರು ಕೆಳಕಂಡಂತೆ ವರ್ಗೀಕರಿಸಿದ್ದಾರೆ.

ಚರಿತ್ರೆಗಳು ೧೧, ನಿಘಂಟು ೧, ವಚನ ಸಂಪಾದನೆ ೪೬, ಶಾಸನ ಸಂಪಾದನೆ ೭, ರಗಳೆ ಸಂಪಾದನೆ ೧೦, ಕಾವ್ಯ ಸಂಪಾದನೆ ೧೨, ಗದ್ಯ ಸಂಪಾದನೆ ೯, ಪತ್ರಿಕಾ ಸಂಪಾದನೆ ೨, ಲೇಖನಗಳು ೧೨೧ಕ್ಕೂ ಮೀರಿ ವಿವಿಧ ವಿಷಯಗಳನ್ನು ಕುರಿತವು. ಭಾಷಣ ಸಾಹಿತ್ಯ ೮, ಮುನ್ನುಡಿಗಳು ೯, ಗ್ರಂಥ ವಿಮರ್ಶೆ ೩೭, ಆತ್ಮಕಥೆ ೨, ದಿನಚರಿ ೧, ಅನುವಾದ ೧ -ಇತ್ಯಾದಿ ಇದಲ್ಲದೆ ಅಪ್ರಕಟಿತ ಸಾಹಿತ್ಯ ೫೧ ವಿವರಗಳನ್ನು ನೀಡಿದ್ದಾರೆ. ಈ ಪೈಕಿ ಕೆಲವು ಮುಖ್ಯ ಗ್ರಂಥಗಳನ್ನು ಕುರಿತು ಕೆಲವು ಮಾತುಗಳನ್ನು ಇಲ್ಲಿ ಹೇಳಿದೆ.

ಬಸವೇಶ್ವರ ವಚನಗಳನ್ನು ೧೯೨೬ರಲ್ಲಿ ಹಳಕಟ್ಟಿ ಅವರು ಮೊದಲಿಗೆ ಪ್ರಕಟಿಸಿದರು. ಅನಂತರ ಹಲವು ಮರು ಆವೃತ್ತಿಗಳು ಬಂದವು. ಅನಂತರ ಹೊಸ ಪದ್ಧತಿಯ ಬಸವೇಶ್ವರನ ವಚನಗಳು ಎಂಬ ಹೆಸರಿನಲ್ಲಿ ಪ್ರಕಟವಾದದ್ದರಲ್ಲಿ ೯೫೯ ವಚನಗಳಿವೆ. ಇವುಗಳನ್ನು ಷಟ್‌ಸ್ಥಲ, ಅಷ್ಟಾವರಣ, ಸಾಮಾಜಿಕ ಮತ್ತು ನೈತಿಕ

ಎಂಬ ವಿಭಾಗಗಳಲ್ಲಿ ವರ್ಗೀಕರಿಸಿದ್ದಾರೆ. ೧೦೦ಕ್ಕೂ ಹೆಚ್ಚಿನ ಉಪಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಅನಂತರ ಸಟೀಕ ಬಸವೇಶ್ವರ ವಚನಗಳನ್ನು ಪ್ರಕಟಿಸಿದರು. ಹೀಗೆ ಬಸವೇಶ್ವರ ವಚನಗಳ ವಿವಿಧ ಆವೃತ್ತಿಗಳನ್ನು ಹೊರತಂದು ಜನಸಾಮಾನ್ಯರಲ್ಲಿ ಬಸವಣ್ಣನವರ ವಚನಗಳು ಪ್ರಚಾರಗೊಳ್ಳಲು ಕಾರಣರಾದರು. ಹಳಕಟ್ಟಿ ಅವರ ಅನಂತರ ೧೯೫೨ರಲ್ಲಿ ಎಲ್. ಬಸವರಾಜು, ೧೯೬೨ರಲ್ಲಿ ಶಿ.ಶಿ. ಬಸವನಾಳ, ೧೯೬೮ರಲ್ಲಿ ಆರ್.ಸಿ. ಹಿರೇಮಠ ಮೊದಲಾದವರು ಬಸವಣ್ಣನವರ ವಚನಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇದಲ್ಲದೆ ಇನ್ನೂ ಅನೇಕರು ಬಗೆಬಗೆಯ ಆವೃತ್ತಿಗಳನ್ನು ತಂದಿದ್ದಾರೆ. ಆಧಾರ ಸಾಮಗ್ರಿ ಆಗಿರುವುದೂ ಮತ್ತು ಹಳಕಟ್ಟಿ ಅವರ ಗ್ರಂಥ ಹಲವು ಬಾರಿ ಮರುಮುದ್ರಣ ಆಗಿರುವುದು. ಈ ಗ್ರಂಥದ ಮಹತ್ವವನ್ನು ಸಾರುತ್ತದೆ.

ದೇವರ ದಾಸಿಮಯ್ಯನ ವಚನಗಳು

ಫ.ಗು. ಹಳಕಟ್ಟಿ ಅವರ ಮತ್ತೊಂದು ಮಹತ್ವದ ಪ್ರಕಟನೆ ದೇವರ ದಾಸಿಮಯ್ಯನ ವಚನಗಳು. ಇತ್ತೀಚಿನ ಸಂಶೋಧನೆಗಳಿಂದ 'ರಾಮನಾಥಾ' ಅಂಕಿತದ ಕೀರ್ತನೆಗಳನ್ನು ಬರೆದವರು ದೇವರ ದಾಸಿಮಯ್ಯ ಅಲ್ಲ ಜೇಡರ ದಾಸಿಮಯ್ಯ ಎಂದು ಹೇಳಲಾಗಿದೆ. ಆದರೆ ದೇವರ ದಾಸಮಯ್ಯ ಹೆಸರೇ ಎಲ್ಲ ಕಡೆ ಪ್ರಚಲಿತವಿದೆ. ದೇವರ ದಾಸಿಮಯ್ಯನ ವಚನಗಳನ್ನು ಮೊದಲ ಬಾರಿಗೆ ಒತ್ತಟ್ಟಿಗೆ ಸಂಗ್ರಹಿಸಿ ಹಳಕಟ್ಟಿ ಪ್ರಕಟಿಸಿದರು. ೧೫ ಹಸ್ತಪ್ರತಿಗಳ ಮತ್ತು

ಇತರ ಗ್ರಂಥಗಳ ಆಧಾರದ ಮೇಲೆ ೧೪೭ ವಚನಗಳನ್ನು ಪರಿಷ್ಕರಿಸಿ ಷಟ್‌ಸ್ಥಲ ಕ್ರಮದಲ್ಲಿ ಜೋಡಿಸಿ ಪ್ರಕಟಿಸಿದ್ದಾರೆ. ಕಠಿಣ ಶಬ್ದಗಳಿಗೆ ಅರ್ಥ ನೀಡಿದ್ದಾರೆ. ಸರಳ ವಿವರಣೆಯನ್ನು ಪ್ರತಿ ವಚನಕ್ಕೆ ಕೊಟ್ಟಿದ್ದಾರೆ. ದೇವರ ದಾಸಿಮಯ್ಯನ ಬಗ್ಗೆ ವಿಸ್ತಾರವಾದ ಪೀಠಿಕೆ ಬರೆದಿದ್ದಾರೆ. ಕನ್ನಡದಲ್ಲಿ ದೇವರ ದಾಸಿಮಯ್ಯನ ವಚನ ಸಾಹಿತ್ಯ ಪ್ರಕಟವಾಗಲು ಇದು ಮಾರ್ಗಕೃತಿ ಆಯಿತು. ಈ ಗ್ರಂಥ ಹೊರಬಂದ ಮೇಲೆ ಕನ್ನಡನಾಡಿನ ವಿದ್ವಾಂಸರು ಈ ಬಗ್ಗೆ ಹೆಚ್ಚು ಗಮನಹರಿಸಿ ಅಧ್ಯಯನ ಮಾಡಿ ತಮ್ಮತಮ್ಮ ಆವೃತ್ತಿಗಳನ್ನು ಪ್ರಕಟಿಸಿದ್ದಾರೆ. ೧೯೫೩ರಲ್ಲಿ ಜ.ಚ.ನಿ., ೧೯೬೬ರಲ್ಲಿ ಬಿ.ಎಸ್. ಸಣ್ಣಯ್ಯ, ೧೯೭೦ರಲ್ಲಿ ಡಾ. ಎಲ್. ಬಸವರಾಜು, ೧೯೭೪ರಲ್ಲಿ ಎಚ್. ದೇವೀರಪ್ಪ ಮತ್ತು ರಾಚಪ್ಪ, ೧೯೭೬ರಲ್ಲಿ ಡಾ. ಎಂ.ಎಸ್. ಸುಂಕಾಪುರ, ೧೯೮೭ರಲ್ಲಿ ಆರ್.ಸಿ. ಹಿರೇಮಠ -ಹೀಗೆ ಹತ್ತಾರು ಮಂದಿ ಸಂಶೋಧಿತ ದೇವರ ದಾಸಿಮಯ್ಯನ ವಚನಗಳ ಪ್ರಕಟನೆಗು ಹೊಂದಿದ್ದು ಜನರ ಮನಸೆಳೆದಿದೆ. ಹೀಗೆ ದೇವರ ದಾಸಿಮಯ್ಯನು ಜನಮಾನಸದಲ್ಲಿ ನೆಲೆಸಲು ಮೂಲ ಕಾರಣ ಹಳಕಟ್ಟಿ ಅವರು.

ವಚನಶಾಸ್ತ್ರಸಾರ ೩ ಭಾಗಗಳು

ಫ.ಗು. ಹಳಕಟ್ಟಿ ಅವರ ವಚನ ಸಂಗ್ರಹದ ಪ್ರಕಟನೆಗಳಲ್ಲಿ ಶಿಖರ ಪ್ರಾಯವಾದ ಪ್ರಕಟನೆ ಇದಾಗಿದೆ. ವಚನಶಾಸ್ತ್ರಸಾರ ಭಾಗ-೧ ೧೯೨೩ರಲ್ಲಿ ೨೩೩೫ ವಚನಗಳೊಂದಿಗೆ ಪ್ರಕಟ

ವಾಗಿದೆ. ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಈ ಪ್ರಮಾಣದ ವಚನ ಸಂಗ್ರಹದ ಪ್ರಕಟನೆ ಇದೇ ಆಗಿದೆ.

ವಚನಶಾಸ್ತ್ರಸಾರ ಭಾಗ-೨ ೧೯೩೮ರಲ್ಲಿ ಪ್ರಕಟವಾಯಿತು. ವೀರಶೈವ ಸಿದ್ಧಾಂತವಾದ ಷಟ್ಸ್ಥಲಕ್ಕೆ ಸಂಬಂಧಿಸಿದ ವಚನಗಳನ್ನು ಇಲ್ಲಿ ಸಂಗ್ರಹಿಸಲಾಯಿತು. ಅತ್ಯಂತ ಉಪಯುಕ್ತವಾದ ೧೪ ಅನುಬಂಧಗಳು ಕೊಟ್ಟಿರುವುದು ಈ ಗ್ರಂಥದ ಹೆಚ್ಚಳವಾಗಿದೆ. ವಚನಶಾಸ್ತ್ರಸಾರದ ಭಾಗ-೩ (ಹೊಸ ಗ್ರಂಥ) ೧೯೩೯ರಲ್ಲಿ ಪ್ರಕಟವಾಯಿತು. ೨೩೪ ಪುಟಗಳಲ್ಲಿ ವೀರಶೈವಾಚಾರಕ್ಕೆ ಸಂಬಂಧಿಸಿದ ವಚನಗಳು ಇಲ್ಲಿವೆ.

ವಚನಶಾಸ್ತ್ರಸಾರ ಭಾಗ-೩ರ ಉತ್ತರಾರ್ಧ, ೧೯೫೩ರಲ್ಲಿ ಪ್ರಕಟವಾಯಿತು. ೩೭೬ ಪುಟಗಳಲ್ಲಿ ಅಷ್ಟಾವರಣ, ಪಂಚಾಚಾರ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ವಚನಗಳಿವೆ. ೧೮೦೦ ಪುಟಗಳಲ್ಲಿ ವಚನ ಸಂಗ್ರಹಣದ ವಚನಶಾಸ್ತ್ರಸಾರ ಗ್ರಂಥತ್ರಯ ಕನ್ನಡ ವಚನ ಸಾಹಿತ್ಯದ ರತ್ನತ್ರಯಗಳಾಗಿವೆ. ಇಂಥ ಸಂಗ್ರಹ ಇನ್ನೊಂದು ಕನ್ನಡದಲ್ಲಿ ಎಂದರೆ ತಪ್ಪಾಗದು. ಹಳಕಟ್ಟಿ ಅವರ ಅಮೋಘ ಕೊಡುಗೆಗಳಲ್ಲಿ ಅಗ್ರಗಣ್ಯವಾದುದು ವಚನಶಾಸ್ತ್ರಸಾರ. ವೀರಶೈವಧರ್ಮದ ವಿಶ್ವಕೋಶ ಇದು.

ಶಿವಶರಣರ ಸಂಗೀತ ವಚನಗಳು

ವಚನಗಾಯನ ವಚನಸಂಗೀತ ಸ್ವರವಚನಗಳು ಇವೆಲ್ಲಾ ಇಂದು ಚಿರಪರಿಚಿತವಾಗಿವೆ. ಆದರೆ ಹಳಕಟ್ಟಿ ಅವರ ಕಾಲಕ್ಕೆ

ಇವು ಗಮನಕ್ಕೆ ಬಂದಿರಲಿಲ್ಲ. ಅನಕ್ಕೃ ಅವರಿಂದ ಪ್ರೇರಿತರಾದ ಮಲ್ಲಿಕಾರ್ಜುನ ಮನಸೂರು ಮತ್ತು ಇತರರು ವಚನಗಾಯನ ಪ್ರಾರಂಭಿಸಿದುದು ಎಲ್ಲರಿಗೂ ತಿಳಿದ ವಿಷಯ. ಆದರೆ ವಚನಗಳನ್ನು ಸಂಗೀತ ಮಾಧ್ಯಮದಲ್ಲಿ ದಾಸರಪದಗಳಂತೆ ಅಳವಡಿಕೆ ಜನರ ಮನದ ಮೇಲೆ ವಿಶೇಷ ಪರಿಣಾಮ ಬೀರಬಲ್ಲದು ಎಂದು ತಿಳಿದ ಹಳಕಟ್ಟಿ ಅವರು ಸಿದ್ಧೇಶ್ವರ ಹೈಸ್ಕೂಲಿನಲ್ಲಿ ಸಂಗೀತ ಶಿಕ್ಷಕರಾಗಿದ್ದ ಪಿ.ವಿ. ಪಾಟೀಲ ಅವರಿಂದ ೭೫ ವಚನಗಳಿಗೆ ಸಂಗೀತವನ್ನು ಅಳವಡಿಸಿ ಪ್ರಕಟಿಸಿದ್ದಾರೆ. ಇದೊಂದು ವಿಶಿಷ್ಟ ಪ್ರಯೋಗವಾಗಿದೆ. **ಕಾಲಜ್ಞಾನ ವಚನಗಳು** ಕನ್ನಡದಲ್ಲಿ ವಿಶಿಷ್ಟ ಸಾಹಿತ್ಯ ಪ್ರಕಾರ ತರ್ಕವನ್ನು ಮೀರಿದ ಸಂಗತಿಗಳು ಇಲ್ಲಿವೆ. ವಿಜ್ಞಾನಿಗಳಲ್ಲಿ ಇಲ್ಲದ ವಿಶೇಷ ಜ್ಞಾನ ಇಲ್ಲಿದೆ. ಅನೇಕ ವಚನಕಾರರ ವಚನಗಳನ್ನು ಆಯ್ದು ಈ ಗ್ರಂಥವನ್ನು ಸಿದ್ಧಪಡಿಸಿದ್ದಾರೆ. ಈ ವಚನಗಳಲ್ಲಿರುವ ಚಾರಿತ್ರಿಕ ಸಂಗತಿಗಳು ಅಧ್ಯಯನ ಯೋಗ್ಯವಾದವು.

ಶೂನ್ಯಸಂಪಾದನೆಗಳು

ವೀರಶೈವಧರ್ಮ ಮತ್ತು ವಚನ ಸಾಹಿತ್ಯದ ಇತಿಹಾಸದಲ್ಲಿ ಶೂನ್ಯಸಂಪಾದನೆಗಳು ಮಹತ್ವದ ಕೊಡುಗೆಗಳಾಗಿವೆ. ೪ ಶೂನ್ಯಸಂಪಾದನೆಗಳು ಪ್ರಸಿದ್ಧವಾಗಿದ್ದು ಇತ್ತೀಚೆಗೆ ಜಯಾ ರಾಜಶೇಖರ್ ಅವರಿಂದ ೫ನೇ ಶೂನ್ಯಸಂಪಾದನೆ ರಚಿತವಾಗಿದೆ. ಗೂಳೂರು ಸಿದ್ಧವೀರಣ್ಣೊಡೆಯರಿಂದ ರಚಿತ ಶೂನ್ಯಸಂಪಾದನೆ ಯನ್ನು ಮೊದಲ ಬಾರಿಗೆ ಹಳಕಟ್ಟಿ ಅವರು ಪ್ರಕಟಿಸಿದ್ದಾರೆ.

ಇದಲ್ಲದೆ ಸಟೀಕ ಶೂನ್ಯಸಂಪಾದನೆಯ ತೃತೀಯೋಪದೇಶ ಪಂಚಮೋಪದೇಶ, ದಶಮೋಪದೇಶ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಶೂನ್ಯಸಂಪಾದನೆ ಅಧ್ಯಯನ ಯುಗ ಪ್ರಾರಂಭ ವಾದುದು ಹಳಕಟ್ಟಿ ಅವರಿಂದ. ಇವರಾನಂತರ ಅನೇಕರು ಶೂನ್ಯಸಂಪಾದನೆ ಕುರಿತು ವಿಮರ್ಶಾತ್ಮಕ ಗ್ರಂಥಗಳನ್ನು ರಚಿಸಿದ್ದಾರೆ. ಡಾ. ಎಸ್.ಎಸ್. ಭೂಸನೂರಮಠರ ಶೂನ್ಯಸಂಪಾದನೆಯ ಪರಾಮರ್ಶೆ, ಡಾ. ತಿಪ್ಪೇರುದ್ರಸ್ವಾಮಿಗಳ ಶೂನ್ಯತತ್ವ ವಿಕಾಸ, ಡಾ. ಚಿದಾನಂದಮೂರ್ತಿ ಅವರ ಶೂನ್ಯತತ್ವ ಸಂಪಾದನೆ ಮೊದಲಾದ ಗ್ರಂಥಗಳು ಹೊರಬಂದಿವೆ. ಕನ್ನಡದಲ್ಲಿ ಶೂನ್ಯಸಂಪಾದನೆ ಸಾಹಿತ್ಯ ಮಹಾಪ್ರಬಂಧಕ್ಕೆ ಯೋಗ್ಯವಾಗಿದೆ. ಇಷ್ಟು ವಿಸ್ತಾರವಾದ ಶೂನ್ಯಸಂಪಾದನೆ ಸಾಹಿತ್ಯಕ್ಕೆ ಬುನಾದಿ ಹಾಕಿದರು ಹಳಕಟ್ಟಿ ಅವರು.

ಶಾಸನಗಳ ಅಧ್ಯಯನ

ಇತಿಹಾಸದ ದೃಷ್ಟಿಯುಳ್ಳವರು ಹಳಕಟ್ಟಿ ಅವರು ಧಾರ್ಮಿಕ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಇತಿಹಾಸ ದೃಷ್ಟಿ ಇರುವುದು ಅಪರೂಪ. ಆದರೆ ಹಳಕಟ್ಟಿ ಅವರು ಎಲ್ಲದರಲ್ಲೂ ಅಧ್ಯಯನ ಶೀಲರು. ಅಗರಖೇಡದ ಶಿಲಾಶಾಸನ, ಅಮುಗಿದೇವನ ಶಿಲಾಶಾಸನ, ವರದಾನಿ ಗುಡ್ಡಮ್ಮ, ಏಕಾಂತ ರಾಮಯ್ಯ, ಸಿದ್ಧರಾಮೇಶ್ವರ ಸುಗೂರು, ಶ್ರೀ ಬಸವಣ್ಣನವರನ್ನು ಕುರಿತ ಶಿಲಾಶಾಸನಗಳನ್ನು ಅಧ್ಯಯನ ಮಾಡಿ ಪ್ರಕಟಿಸಿದ್ದಾರೆ.

ವಚನಪ್ರಿಯರಾದ ಹಳಕಟ್ಟಿ ಅವರು ಕೆಳದಿ ಸಂಸ್ಥಾನದ ರಾಯರ ವಂಶಾವಳಿ ಕೊಡಗಿನ ರಾಜೇಂದ್ರ ಅಂಥ ಐತಿಹಾಸಿಕ ಗದ್ಯಕೃತಿಗಳನ್ನು ಪ್ರಕಟಿಸಿದ್ದಾರೆ. ಹೀಗೆ ವೀರಶೈವ ಸಾಹಿತ್ಯಕ್ಕೆ ವಿವಿಧ ಮುಖಗಳ ಸೇವೆಯನ್ನು ಹಳಕಟ್ಟಿ ಸಲ್ಲಿಸಿದ್ದಾರೆ.

ಗ್ರಂಥಋಣ

೧. ವಚನ ಗುಮ್ಮಟ ಫ.ಗು. ಹಳಕಟ್ಟಿ - ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ೧೯೯೮

೨. ಮಣಿಹ -ಸಂ. ಎಂ.ವಿ. ಸೀತಾರಾಮಯ್ಯ, ೧೯೮೨

೩. ಫ.ಗು. ಹಳಕಟ್ಟಿ - ಡಾ. ದೇವೇಂದ್ರಕುಮಾರ ಹಕಾರಿ

೪. ಶಿವಾನುಭವ ಪತ್ರಿಕೆ - ಕಲ್ಬುರ್ಗಿ ಎಂ.ಎಂ. ಮತ್ತು ಫ.ಗು. ಹಳಕಟ್ಟಿ

೫. ವಚನ ಪಿತಾಮಹ ಫ.ಗು. ಹಳಕಟ್ಟಿ - ಬಸವಪಥ ವಿಶೇಷ ಸಂಚಿಕೆ, ೧೯೮೦

೬. ವಚನ ಗುಮ್ಮಟ - ಡಾ. ಬಿ.ಎಂ. ಪಾಟೀಲ, ೨೦೦೬

೭. ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟಗಳು ಸಮೀಕ್ಷೆ - ನಂಜುಂಡಸ್ವಾಮಿ

೮. ಹಳಕಟ್ಟಿ ನುಡಿಪರುಷ - ಶಾಂತರಸ, ೧೯೮೩

೯. ಫ.ಗು. ಹಳಕಟ್ಟಿ ಅವರ ಬಗ್ಗೆ ಲೇಖನಗಳು

೧೦. ವಚನಶಾಸ್ತ್ರ ರಹಸ್ಯ - ರಂ.ರಾ. ದಿವಾಕರ

೧೨. ಮತ್ತು ಇತರ ಕೃತಿಗಳು

ನಮ್ಮ ಪ್ರಕಟಣೆಗಳು

	ಪುಸ್ತಕದ ಹೆಸರು	ವರ್ಷ	ಲೇಖಕರು	ಬೆಲೆ
೧.	ಪದ್ಮಶ್ರೀ ಪ್ರೊ. ಪಿ.ಎನ್. ಕೌಲ	೨೦೦೬	ಡಾ. ಆರ್. ಶಿವಣ್ಣ	ರೂ.೭೫/-
೨.	ಭಕ್ತಿ ಭಂಡಾರಿ ಬಸವಣ್ಣ	”	ಡಾ. ಬಿ.ಎಸ್. ಸ್ವಾಮಿ	ರೂ.೬೦/-
೩.	ಚನ್ನಬಸವ ಪುರಾಣದಲ್ಲಿ ಚನ್ನಬಸವಣ್ಣ	”	ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ	ರೂ.೨೦/-
೪.	ಶರಣ ಟಿ. ಸಿದ್ದಲಿಂಗಯ್ಯ	”	ಡಾ. ಆರ್. ಶಿವಣ್ಣ	ರೂ.೨೬/-
೫.	ಸಂತ ಸೈಯದ್ ತಾತ	೨೦೦೯	ಡಾ. ಸಿದ್ಧಗಂಗಯ್ಯ ಕಂಬಾಳು	ರೂ.೪೦/-
೬.	ಬಹುರೂಪಿ ಚೌಡಯ್ಯ	”	ಡಾ. ಸಿದ್ಧಗಂಗಯ್ಯ ಕಂಬಾಳು	ರೂ.೪೦/-
೭.	ಸಂಸ್ಕೃತ ಸಾಹಿತ್ಯದಲ್ಲಿ ಬಸವಣ್ಣ	”	ಡಾ. ಸಿ. ಶಿವಕುಮಾರಸ್ವಾಮಿ	ರೂ.೪೦/-
೮.	ಕಿತ್ತೂರು ರಾಣಿ ಚೆನ್ನಮ್ಮ	೨೦೦೯	ಡಾ. ಚೆನ್ನಕ್ಕ ಪಾವಟೆ	ರೂ.೪೦/-
	ಶ್ರೀಸಾಮಾನ್ಯರ ಮಾಲಿಕೆಯಲ್ಲಿ ಶರಣರ ಜೀವನ ಚಿತ್ರಗಳು			
೯.	೧೦೧ ಬಸವಾದಿ ಶರಣರ ಕಿರು ಪರಿಚಯ/ಸಂಕ್ಷಿಪ್ತ ಪರಿಚಯ	೨೦೦೮	ಡಾ. ಆರ್. ಶಿವಣ್ಣ	ರೂ.೮೦/-
೧೦.	೧೦೧ ಶಿವಶರಣೆಯರು	”	ಡಾ. ಆರ್. ಶಿವಣ್ಣ	ರೂ.
೧೧.	ಆಯ್ದಕ್ಕಿ ಮಾರಯ್ಯ	”	ಪ್ರೇಮಾಭಟ್	ರೂ.೩೫/-
೧೨.	ಹೆಂಡದ ಮಾರಯ್ಯ	”	ಪ್ರೊ. ಬಿ. ವಿರೂಪಾಕ್ಷ	ರೂ.೨೫/-
೧೩.	ಶಿವಸಾಹಿತ್ಯ ಸಾಮ್ರಾಟ ಶ್ರೀ ಜ.ಚ.ನಿ.	”	ಡಾ. ಬಿ.ಎಸ್. ಸ್ವಾಮಿ	ರೂ.೪೫/-
೧೪.	ಕರ್ತಾರನ ಕಮ್ಮಟ ಕಾದಂಬರಿಯಲ್ಲಿ ಮೂಡಿಬಂದ ಬಸವಣ್ಣ	”	ಎನ್.ಎಸ್. ಶ್ರೀಧರಮೂರ್ತಿ	ರೂ.೪೦/-
೧೫.	ಪಾಲ್ಕುರಿಕೆ ಸೋಮನಾಥ	”	ಡಾ. ಬಿ.ಎಸ್. ಸ್ವಾಮಿ	ರೂ.೩೦/-
೧೬.	ಬಸವದೇವರಾಜ ರಗಳೆಯಲ್ಲಿ ಚಿತ್ರಿತನಾದ ಬಸವಣ್ಣ	”	ಡಾ. ವಿಜಯಾ ಸುಬ್ಬರಾಜ್	ರೂ.೨೫/-
೧೭.	ಅಕ್ಕಮಹಾದೇವಿ	”	ಸು. ರುದ್ರಮೂರ್ತಿ ಶಾಸ್ತ್ರಿ	ರೂ.೨೫/-

೧೮.	ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಪರಂಪರೆ	”	ಡಾ. ಆರ್. ಶಿವಣ್ಣ	ರೂ.೫೫/-
೧೯.	ಸಿದ್ಧಗಂಗೆ	”	ಡಾ. ಆರ್. ಶಿವಣ್ಣ	ರೂ.೪೦/-
೨೦.	ಶರಣೆ ಜಯದೇವಿ ತಾಯಿ	”	ಡಾ. ಬಿ.ಎಸ್. ಸ್ವಾಮಿ	ರೂ.೩೫/-
೨೧.	ರಾಘವಾಂಕ ಚಿತ್ರಿಸಿದ ಸಿದ್ಧರಾಮ	”	ಡಾ. ವಿಜಯಾ ಸುಬ್ಬರಾಜ್	ರೂ.೪೦/-
೨೨.	ಮರುಳಸಿದ್ಧ	”	ಬೇಲೂರು ರಾಮಮೂರ್ತಿ	ರೂ.೨೫/-
೨೩.	ಶ್ರೀ ರೇವಣಸಿದ್ಧ	”	ಡಾ. ಎಸ್. ವಿದ್ಯಾಶಂಕರ	ರೂ.೨೫/-
೨೪.	ಭೀಮಕವಿ ಚಿತ್ರಿಸಿದ ಬಸವಣ್ಣ	”	ಡಾ. ಎಸ್. ವಿದ್ಯಾಶಂಕರ	ರೂ.೨೫/-
೨೫.	ಲಕ್ಕಣ್ಣ ದಂಡೇಶ	”	ಡಾ. ಸಿ.ಯು. ಉಮಾದೇವಿ	ರೂ.೩೫/-
೨೬.	ಲಕ್ಕಣ್ಣ ದಂಡೇಶ ಚಿತ್ರಿಸಿದ ಬಸವಣ್ಣ	”	ಹೀ.ಚಿ. ಶಾಂತವೀರಯ್ಯ	ರೂ.೩೫/-
೨೭.	ಬಸವರಾಜ ತುಪ್ಪದ ಅವರ 'ಬಸವ ದರ್ಶನಂ' ಕಾವ್ಯದಲ್ಲಿ ಬಸವಣ್ಣ	”	ನಾಗಲಕ್ಷ್ಮಿ ವೀರೇಶ್	ರೂ.೨೫/-
೨೮.	ಶ್ರೀ ಸರ್ಪಭೂಷಣ ಶಿವಯೋಗಿಗಳು	”	ಟಿ.ಆರ್. ಮಹಾದೇವಯ್ಯ	ರೂ.೨೫/-
೨೯.	ಶೂನ್ಯಸಂಪಾದನೆಗಳು	”	ಜಯಾ ರಾಜಶೇಖರ್	ರೂ.೫೦/-
೩೦.	ಕೆರೆಯ ಪದ್ಮರಸರು	”	ಹೀ.ಚಿ. ಶಾಂತವೀರಯ್ಯ	ರೂ.೪೦/-
೩೧.	ಶರಣ ಕೊಂಡಗುಳಿ ಕೇಶಿರಾಜ	”	ಎಂ.ಜಿ. ನಾಗರಾಜರಾವ್	ರೂ.೩೦/-
೩೨.	ಶ್ರೀ ಘನಮಠದ ನಾಗಭೂಷಣ ಶಿವಯೋಗಿಗಳು	”	ಡಾ. ಸಂಗಮೇಶ ಸವದತ್ತಿಮಠ	ರೂ.೫೦/-
೩೩.	ಶರಣ ಆದಯ್ಯ	”	ಟಿ.ಆರ್. ಮಹಾದೇವಯ್ಯ	ರೂ.೨೫/-
೩೪.	ಹೇಮರಡ್ಡಿ ಮಲ್ಲಮ್ಮ	”	ಡಾ. ಆರ್. ಶಿವಣ್ಣ	ರೂ.೪೫/-
೩೫.	ಬಸವನ ಬಾಗೇವಾಡಿಯ ಬೆಳಕು ಶಿವಲಿಂಗ ಶಿವಯೋಗಿಗಳು	”	ನೀಲಾವರ ಸುರೇಂದ್ರ ಅಡಿಗ	ರೂ.೪೦/-
೩೬.	ಅಲ್ಲಮಪ್ರಭು	”	ಶಾ.ಮಂ. ಕೃಷ್ಣರಾವ್	ರೂ.೪೦/-
೩೭.	ಶರಣ ಗುರುಮಲ್ಲೇಶ್ವರರು	೨೦೦೭	ಬಿ.ಆರ್. ಹಿರೇಮಠ	ರೂ.೨೦/-
೩೮.	ಕೇದಾರ ಪೀಠ	”	ಡಾ. ಬಿ.ಎಸ್. ಸ್ವಾಮಿ	ರೂ.೨೦/-
೩೯.	ಮಡಿವಾಳ ಮಾಚಿದೇವ	”	ಎಂ.ಎಸ್. ನರಸಿಂಹಮೂರ್ತಿ	ರೂ.೨೦/-
೪೦.	ಮೋಳಿಗೆ ಮಾರಯ್ಯ	”	ಎಂ.ಎಸ್. ನರಸಿಂಹಮೂರ್ತಿ	ರೂ.೨೦/-
೪೧.	ಮುರುಗೋಡ-ಉಳವೆಯ ಹೆಬ್ಬಾಗಿಲು	”	ಡಾ. ಸಂಗಮೇಶ ಸವದತ್ತಿಮಠ	ರೂ.೪೫/-

೪೨.	ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳು	”	ಡಾ. ಎಂ.ಎಸ್. ಲಠ್ಠೆ	ರೂ.೩೦/-
೪೩.	ಕ್ರಾಂತಿಕಲ್ಯಾಣ ಕಾದಂಬರಿಯಲ್ಲಿ ಮೂಡಿಬಂದ ಬಸವಣ್ಣ	”	ಎನ್.ಎಸ್. ಶ್ರೀಧರಮೂರ್ತಿ	ರೂ.೪೦/-
೪೪.	ಬಸವಣ್ಣನ ನೆಲೆಗಳು	”	ಎಚ್.ಎಸ್. ಸಿದ್ಧಗಂಗಪ್ಪ	ರೂ.೩೫/-
೪೫.	ಮುಪ್ಪಿನ ಷಡಕ್ಷರಿ	”	ಡಾ. ಬಿ.ಎಸ್. ಸ್ವಾಮಿ	ರೂ.೩೫/-
೪೬.	ಸಿದ್ಧೇಶ್ವರ ಕ್ಷೇತ್ರ	”	ಡಾ. ಬಿ. ಸಿದ್ಧಲಿಂಗ ಸ್ವಾಮಿ	ರೂ.೨೫/-
೪೭.	ಶರಣ ಕೆಂಡಗಣ್ಣ ಸ್ವಾಮಿಗಳು	”	ಜನಪ್ರಿಯ	ರೂ.೩೦/-
೪೮.	ಶರಣ ಬಕ್ಕೇಶ್ವರ	”	ಡಾ.ಶಕುಂತಲಾ ಭೂಸನೂರಮಠ	ರೂ.೩೫/-
೪೯.	ಮಲೆಯ ಮಾದೇಶ್ವರ	”	ಜನಪ್ರಿಯ	ರೂ.೩೦/-
೫೦.	ಇಳಕಲ್ಲು ವಿಜಯ ಮಹಂತ ಶಿವಯೋಗಿಗಳು	”	ಪ್ರೊ. ಬಿ. ವಿರೂಪಾಕ್ಷಪ್ಪ	ರೂ.೨೫/-
೫೧.	ಎಡಯೂರು ಸಿದ್ಧಲಿಂಗೇಶ್ವರ	”	ಹುರುಳುಗೆರೆ ವೇಣುಗೋಪಾಲ	ರೂ.೩೦/-
೫೨.	ಕೂಡಲೂರು ಬಸವಲಿಂಗ ಶರಣರು	”	ಬಿ. ಸಿದ್ಧಲಿಂಗಸ್ವಾಮಿ	ರೂ.೩೬/-
೫೩.	ಅನುಭವ ಮಂಟಪ	”	ನೀಲಾವರ ಸುರೇಂದ್ರ ಅಡಿಗ	ರೂ.೩೬/-
೫೪.	ತೋಪಿನಮಠದ ಶ್ರೀ ಷಡಕ್ಷರ ಶಿವಯೋಗಿಗಳು	”	ಸವಿರಾಜು (ಶಿರೂರಮಠ)	ರೂ.೩೫/-
೫೫.	ಚಾಮರಸ ಚಿತ್ರಿಸಿದ ಅಲ್ಲಮ	”	ಡಾ. ವಿಜಯಾ ಸುಬ್ಬರಾಜ್	ರೂ.೪೫/-
೫೬.	ನೀರಲಕೇರಿ ಬಸವಲಿಂಗ ಶರಣರು	”	ಎಲ್.ಎಸ್. ಶಾಸ್ತ್ರಿ	ರೂ.೨೨/-
೫೭.	ಶರಣ ನನ್ನಯ್ಯ	”	ಪ್ರೇಮಾಭಟ್	ರೂ.೪೦/-
೫೮.	ನಿಜಗುಣ ಶಿವಯೋಗಿಗಳು	”	ಡಾ. ವಿಜಯಾ ಸುಬ್ಬರಾಜ್	ರೂ.೪೨/-
೫೯.	ಬಸವಣ್ಣ ಗರಣಿ ಬಸವೇಶ್ವರ ಕಾವ್ಯದಲ್ಲಿ	”	ಟಿ.ಆರ್. ಮಹಾದೇವಯ್ಯ	ರೂ.೨೫/-
೬೦.	ಹರಿಹರ ಚಿತ್ರಿಸಿದ ಪ್ರಭುದೇವರು	”	ಟಿ.ಆರ್. ಮಹಾದೇವಯ್ಯ	ರೂ.೨೫/-
೬೧.	ಮಲುಹಣ-ಮಲುಹಣಿ	”	ಡಾ. ಎಸ್. ವಿದ್ಯಾಶಂಕರ	ರೂ.೨೫/-
೬೨.	ಅಜಗಣ್ಣ-ಮುಕ್ತಾಯಕ್ಕ	”	ಡಾ. ಎಸ್. ವಿದ್ಯಾಶಂಕರ	ರೂ.೨೮/-
೬೩.	ಸರ್ವಜ್ಞ	”	ಶಾ.ಮಂ. ಕೃಷ್ಣರಾಯ	ರೂ.೩೬/-
೬೪.	ರುದ್ರಮ್ಮ ಶರಣೆ	”	ಎಲ್.ಎಸ್. ಶಾಸ್ತ್ರಿ	ರೂ.೨೪/-
೬೫.	ಶರಣ ಕೆ.ಪಿ. ಪುಟ್ಟಣ್ಣ ಚೆಟ್ಟಿ	”	ಜನಪ್ರಿಯ	ರೂ.೪೨/-

೬೬.	ಷಣ್ಮುಖ ಶಿವಯೋಗಿಗಳು	”	ಡಾ. ಮಲ್ಲಿಕಾರ್ಜುನಶಿವಪ್ಪ ಲಠ್ಠೆ	ರೂ.೩೬/-
೬೭.	ಸುತ್ತೂರು ಮಠದ ಪರಂಪರೆ	”	ಡಾ. ಆರ್. ಶಿವಣ್ಣ	ರೂ.೨೫/-
೬೮.	ಕಾಶಿಪೀಠ	”	ಡಾ. ಸಿ.ಯು. ಉಮಾದೇವಿ	ರೂ.೬೦/-
೬೯.	ಶರಣ ಡಿ.ಎಂ. ಚಂದ್ರಶೇಖರ್	”	ಡಾ. ಆರ್. ಶಿವಣ್ಣ	ರೂ.೨೫/-
೭೦.	ಜೇಡರ ದಾಸಿಮಯ್ಯ	”	ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು	ರೂ.೪೪/-
೭೧.	ಕರಪಾಲ ಮೇಳದಲ್ಲಿ ಮೂಡಿಬಂದ ಬಸವಪುರಾಣ	”	ನೀಲಾವರ ಸುರೇಂದ್ರ ಅಡಿಗ	ರೂ.೩೮/-
೭೨.	ಶರಣೆ ದಾನಮ್ಮ	”	ಎಂ.ಎಸ್. ನರಸಿಂಹಮೂರ್ತಿ	ರೂ.೩೬/-
೭೩.	ಶ್ರೀ ತೋಂಟದಾರ್ಯ ಜಗದ್ಗುರು ಡಾ. ಸಿದ್ಧಲಿಂಗ ಸ್ವಾಮಿಗಳು	”	ಶಾ.ಮಂ. ಕೃಷ್ಣರಾಯ	ರೂ.೪೫/-
೭೪.	ಚಿತ್ರಸಂಪುಟದಲ್ಲಿ ಜಗದ್ಗುರು ಡಾ. ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು	”	ಸಂ: ಡಾ. ಆರ್. ಶಿವಣ್ಣ	ರೂ.೫೦/-
೭೫.	ಶರಣ ಹರಳಯ್ಯ	”	ಸದಾನಂದ ಹೋಳಿಕಟ್ಟಿ	ರೂ.೨೦/-
೭೬.	ಶಂಕರ ದಾಸಿಮಯ್ಯ	”	ಎಚ್.ಎಸ್. ವೇಣುಗೋಪಾಲ	ರೂ.೩೨/-
೭೭.	ಶರಣ ಗುಬ್ಬಿ ತೋಟದಪ್ಪ	”	ಬಿ. ರಾಜಪ್ಪ	ರೂ.೨೮/-
೭೮.	ಶರಣ ಹರ್ಡೇಕರ್ ಮಂಜಪ್ಪ	೨೦೦೭	ಬಿ.ಎಸ್.ಎಸ್.	ರೂ.೩೨/-
೭೯.	ಹರ್ಡೇಕರ್ ಮಂಜಪ್ಪ ಚಿತ್ರಿಸಿದ ಬಸವಣ್ಣ	”	ಬಿ.ಎಸ್.ಎಸ್.	ರೂ.೨೨/-
೮೦.	ಚಿಕೇನಕೊಪ್ಪ ಚನ್ನವೀರ ಶರಣರು	”	ಎನ್.ಎಸ್. ಶ್ರೀಧರಮೂರ್ತಿ	ರೂ.೪೦/-
೮೧.	ವೀರಶೈವ ಪಂಚಪೀಠ ಪರಂಪರೆ	”	ಡಾ. ಆರ್. ಶಿವಣ್ಣ	ರೂ.೪೫/-
೮೨.	ಶರಣ ಮಹಾಕವಿ ಷಡಕ್ಷರದೇವ	೨೦೦೮	ಡಾ. ಬಿ.ಎಸ್. ಸ್ವಾಮಿ	ರೂ.೨೫/-
೮೩.	ಶರಣ ಮಹಾಕವಿ ಹರಿಹರ	”	ಡಾ. ಬಿ.ಎಸ್. ಸ್ವಾಮಿ	ರೂ.೨೬/-
೮೪.	ಸಿದ್ಧಗಂಗಯ್ಯ ಕಂಬಾಳು ಮಹಾಕಾವ್ಯದಲ್ಲಿ ಬಸವಣ್ಣ	”	ಬಿ. ಸಿದ್ಧಲಿಂಗಸ್ವಾಮಿ	ರೂ.೨೨/-
೮೫.	ವೀರೇಶ್ವರ ಶರಣರು	”	ಬಿ. ಸಿದ್ಧಲಿಂಗ ಸ್ವಾಮಿ	ರೂ.೪೫/-
೮೬.	ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ	”	ಡಾ. ವಿಜಯಾ ಸುಬ್ಬರಾಜ್	ರೂ.೩೨/-

೮೭.	ಜಗದ್ಗುರು ಜಯದೇವ ಮುರುಘ ರಾಜೇಂದ್ರ ಸ್ವಾಮಿಗಳು	"	ಸಿ.ಎಂ. ಚನ್ನಬಸವಯ್ಯ	ರೂ.೪೦/-
೮೮.	ಚರಬಸವೇಶ ಶರಣರು	"	ಬಿ.ಎಸ್.ಎಸ್.	ರೂ.೨೦/-
೮೯.	ಶರಣ ವಾರದ ಮಲ್ಲಪ್ಪ	"	ಬಿ.ಎಸ್.ಎಸ್.	ರೂ.೨೬/-
೯೦.	ಮುಸ್ಟೂರಿನ ಓಂಕಾರ ಹುಚ್ಚನಾಗಲಿಂಗ ಶರಣರು	"	ಜನಪ್ರಿಯ	ರೂ.೨೧/-
೯೧.	ಚಳ್ಳಗುರ್ಕಿ ಎರ್ರಿತಾತ	"	ಎನ್.ಎಸ್. ಶ್ರೀಧರಮೂರ್ತಿ	ರೂ.೨೫/-
೯೨.	ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ	"	ಎಸ್.ವಿ. ಶಂಕರಪ್ಪ	ರೂ.೨೬/-
೯೩.	ಮುರಗೋಡ ಮಹಾಂತ ಶಿವಯೋಗಿಗಳು	"	ನೀಲಾವರ ಸುರೇಂದ್ರ ಅಡಿಗ	ರೂ.೨೫/-
೯೪.	ಕರ್ಮಯೋಗಿ ಡಾ. ಶಿವಬಸವ ಸ್ವಾಮಿಗಳು	"	ಡಾ. ಆರ್. ಶಿವಣ್ಣ	ರೂ.೨೬/-
೯೫.	ಹಡಪದ ಅಪ್ಪಣ್ಣ	"	ಎಲ್.ಎಸ್. ಶಾಸ್ತ್ರಿ	ರೂ.೨೧/-
೯೬.	ದುಗ್ಗಳೆ	"	ಡಾ. ಕೆ.ಎಸ್. ರತ್ನಮ್ಮ	ರೂ.೩೮/-
೯೭.	ಕೊಟ್ಟೂರು ಬಸವೇಶ್ವರ	"	ಪ್ರೇಮಾಭಟ್	ರೂ.೩೦/-
೯೮.	ಮತಕೂರು ಶ್ರೀ ನಂಜುಂಡ ಶಿವಯೋಗಿಗಳು	"	ಟಿ.ಆರ್. ಮಹಾದೇವಯ್ಯ	ರೂ.೩೦/-
೯೯.	ಸಾವಳಗಿ ಶಿವಲಿಂಗೇಶ್ವರರು	"	ಜನಪ್ರಿಯ	ರೂ.೨೨/-
೧೦೦.	ಕುಂಬಾರ ಗುಂಡಯ್ಯ	"	ಎಲ್.ಎಸ್. ಶಾಸ್ತ್ರಿ	ರೂ.೨೦/-
೧೦೧.	ಶರಣೆ ಬೊಂತಾದೇವಿ	"	ಡಾ. ಸಿ.ಜಿ. ಉಷಾದೇವಿ	ರೂ.೨೦/-
೧೦೨.	ಶರಣ ಗುರಿಕಾರ್ ಮಲ್ಲಪ್ಪನವರು	"	ಡಾ. ಕೆ.ಎಸ್. ರತ್ನಮ್ಮ	ರೂ.೩೨/-
೧೦೩.	ಹಿಂದಿಯಲ್ಲಿ ಬಸವ ಸಾಹಿತ್ಯ	"	ಡಾ. ಪ್ರಭಾಶಂಕರ ಪ್ರೇಮಿ	ರೂ.೨೫/-
೧೦೪.	ನಗೆಮಾರಿತಂದೆ	"	ಎಂ.ಎಸ್. ನರಸಿಂಹಮೂರ್ತಿ	ರೂ.೨೬/-
೧೦೫.	ಸಿದ್ಧಾರೂಢರು	"	ಎಚ್.ಎಸ್. ವೇಣುಗೋಪಾಲ್	ರೂ.೨೬/-
೧೦೬.	ಮಾದಾರ ಚೆನ್ನಯ್ಯ	"	ಶ್ರೀ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು	ರೂ.೨೫/-
೧೦೭.	ಅಮರ ಚೇತನ	"	ಡಾ. ಆರ್. ಶಿವಣ್ಣ	ರೂ.೩೦/-
೧೦೮.	ಮಹಾಮಹಿಮ ಶ್ರೀ ಅಲ್ಲೀಪುರದ ತಾತ	"	ಡಾ. ಕೋ. ಚೆನ್ನಬಸಪ್ಪ	ರೂ.೨೫/-

೧೦೯.	ಕೂಡಲ ಸಂಗಮ	”	ಡಾ. ಆರ್. ಶಿವಣ್ಣ	ರೂ.೨೫/-
೧೧೦.	ವಚನ ಭಂಡಾರಿ ಶಾಂತರಸ	”	ಡಾ. ಎಸ್.ಆರ್. ಗುಂಜಾಳ	ರೂ.೨೫/-
೧೧೧.	ಅಂಬಿಗರ ಚೌಡಯ್ಯ	೨೦೦೯	ಡಾ. ಬಸವರಾಜ ಸಬರದ	ರೂ.೨೫/-
೧೧೨.	ಗಾನಗಂಗೆ ಪಂಚಾಕ್ಷರಿ ಗವಾಯಿ	”	ಡಾ. ಡಿ. ಮಂಗಳಾ ಪ್ರಿಯದರ್ಶಿನಿ	ರೂ.೪೦/-
೧೧೩.	ಶಿವಯೋಗ ಮಂದಿರ	”	ಎಸ್.ಆರ್. ಗುಂಜಾಳ್	ರೂ.೩೫/-
೧೧೪.	ಬಸವತತ್ತ್ವದ ಹಾದಿಯಲ್ಲಿ	”	ನೀಲಾವರ ಸುರೇಂದ್ರ ಅಡಿಗ	ರೂ.೩೦/-
೧೧೫.	ಗರಗದ ಶ್ರೀ ಮಡಿವಾಳ ಶಿವಯೋಗಿಗಳು	”	ಶಾಂತಲಾ ಯೋಗಿಶ ಯಡ್ರಾವಿ	ರೂ.೩೫/-
೧೧೬.	ಏಕಾಂತ ರಾಮಯ್ಯ	”	ವಿ. ರಾಣಿ ಗೋವಿಂದರಾಜು	ರೂ.೨೦/-
೧೧೭.	ಹಾನಗಲ್ಲು ಕುಮಾರ ಸ್ವಾಮಿಗಳು	”	ಡಾ. ಬಿ.ಎಸ್. ಸ್ವಾಮಿ	ರೂ.೨೫/-
೧೧೮.	ಶರಣ ಬಸವೇಶ್ವರ	”	ಡಾ. ಬಿ.ಎಸ್. ಸ್ವಾಮಿ	ರೂ.೨೦/-
೧೧೯.	ಕಂಚಿ ಶಂಕರಾರಾಧ್ಯರ ಬಸವಪುರಾಣದಲ್ಲಿ ಬಸವಣ್ಣ	”	ಡಾ. ಬಿ.ಎಸ್. ಸ್ವಾಮಿ	ರೂ.೨೦/-
೧೨೦.	ಯುಗದ ಉತ್ಸಾಹಿ ಬಸವಣ್ಣ	”	ಡಾ. ಎಂ. ಚಿದಾನಂದಮೂರ್ತಿ	ರೂ.೨೦/-
೧೨೧.	ಲಿಂಗವಂತರ ವಿಶ್ವಕೋಶ -ಒಂದು ಸಮೀಕ್ಷೆ	”	ಡಾ. ಎಸ್.ಆರ್. ಗುಂಜಾಳ್	ರೂ.೩೦/-
೧೨೨.	ಉರಿಲಿಂಗ ಪೆದ್ದಿ	”	ಪ್ರೇಮಾಭಟ್	ರೂ.೩೦/-
೧೨೩.	ಶರಣ ಬಶೆಟ್ಟಪ್ಪ ಭೂಮಾ	”	ಶಾ.ಮಂ. ಕೃಷ್ಣರಾಯ	ರೂ.೩೫/-
೧೨೪.	ವಚನ ತಪಸ್ವಿ ಫ.ಗು. ಹಳಕಟ್ಟಿ	”	ಪ್ರೊ. ಜಿ. ಅಶ್ವತ್ಥನಾರಾಯಣ	ರೂ.೨೫/-
೧೨೫.	ಸಿದ್ಧಗಂಗೆಯ ಸಿದ್ಧ ಉದ್ದಾನ ಶಿವಯೋಗಿ	”	ಸಿ.ಎಂ. ಚನ್ನಬಸವಯ್ಯ	ರೂ.೩೫/-
೧೨೬.	ಬೆಳವಡಿ ಮಲ್ಲಮ್ಮಾ ಜಿ	”	ಸಿ.ಎಂ. ಚನ್ನಬಸವಯ್ಯ	ರೂ.೨೫/-
೧೨೭.	ಬಸವಾದಿ ಶರಣರ ಪವಾಡಗಳು	”	ನೀಲಾವರ ಸುರೇಂದ್ರ ಅಡಿಗ	ರೂ.೨೫/-
೧೨೮.	ಬಸವಾದಿ ಶರಣರ ಕಾಯಕದ ಅಯ್ಯಗಳು	”	ಡಾ. ಎಸ್.ಆರ್. ಗುಂಜಾಳ್	ರೂ.
೧೨೯.	ನೂರೊಂದು ಶರಣರ ನೂರೊಂದು ವಚನಗಳು	”	ಡಾ. ಆರ್. ಶಿವಣ್ಣ	ರೂ.

ಫ.ಗು. ಹಳಕಟ್ಟಿಯವರು ಶರಣ, ವಚನ ತಪಸ್ವಿ, ಸಾಹಿತಿ, ವಿದ್ವಾಂಸರು. ತಮ್ಮ ಜೀವನವನ್ನೆಲ್ಲಾ ಶರಣ ಸಾಹಿತ್ಯ ಕೃಷಿಗೆ ಮೀಸಲಿಟ್ಟಿದ್ದವರು. ಶೂನ್ಯಸಂಪಾದನೆಯನ್ನು ಮೊದಲಬಾರಿಗೆ ಪ್ರಕಟಿಸಿದವರು. ಕನ್ನಡದಲ್ಲಿ ಶೂನ್ಯಸಂಪಾದನೆ ಅಧ್ಯಯನ ಯುಗ ಪ್ರಾರಂಭವಾದುದು ಇವರಿಂದಲೇ. ಇತಿಹಾಸ ದೃಷ್ಟಿಯುಳ್ಳ ಇವರು ಅಮುಗಿದೇವ, ಸಿದ್ಧರಾಮ, ಬಸವಣ್ಣ ಮುಂತಾದವರನ್ನು ಕುರಿತ ಶಿಲಾಶಾಸನಗಳನ್ನು ಅಧ್ಯಯನ ಮಾಡಿ ಪ್ರಕಟಿಸಿದ್ದಾರೆ. ಬಸವೇಶ್ವರರ ವಚನಗಳನ್ನು ೧೯೨೬ರಲ್ಲಿ ಮೊದಲಿಗೆ ಪ್ರಕಟಿಸಿದರು. ಚರಿತ್ರೆ, ನಿಘಂಟು, ಗದ್ಯ ಸಂಪಾದನೆ, ಪತ್ರಿಕಾ ಸಂಪಾದನೆ, ಲೇಖನಗಳು, ಗ್ರಂಥ ವಿಮರ್ಶೆ, ಆತ್ಮಕಥೆ, ದಿನಚರಿ, ಅನುವಾದ ಮುಂತಾದುವುಗಳ ಕೃಷಿ ಮಾಡಿದವರು. ಶಿವಾನುಭವ ಶಬ್ದಕೋಶ ಕನ್ನಡಕ್ಕೆ ಇವರ ಉತ್ತಮ ಕೊಡುಗೆ. ಹಳಕಟ್ಟಿಯವರು ವೀರಶೈವಧರ್ಮ, ಸಾಹಿತ್ಯಗಳ ಜೀರ್ಣೋದ್ಧಾರ ಮಾಡಿದ ಮಹಾಪುರುಷ. ಕೇವಲ ವೀರಶೈವ ಸಮುದಾಯವಷ್ಟೇ ಅಲ್ಲ, ಇಡೀ ಕನ್ನಡ ನಾಡಿನ ಕನ್ನಡಿಗರೆಲ್ಲ ಕೃತಜ್ಞರಾಗಬೇಕಾಗಿರುವಂಥ ವಚನ ಸಾಹಿತ್ಯವನ್ನು ನೀಡಿ ಗೌರವಕ್ಕೆ ಪಾತ್ರರಾದವರು ಫ.ಗು. ಹಳಕಟ್ಟಿಯವರು.

–ಡಾ. ಬಿ.ಎಸ್. ಸ್ವಾಮಿ

ಬಸವತತ್ತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ
ರಾಜರಾಜೇಶ್ವರಿ ನಗರ, ಬೆಂಗಳೂರು-98